# ಅಂಶ - 3 ಪದ ರಚನೆ

ವಿಷಯ ಕ್ರಮ


3.0 ಉದ್ದೇಶ
3.1 ಪೀಠಿಕೆ
3.2 ಪದರಚನೆ
3.3 ನಾಮಪದ
3.3.1 ನಾಮಗಳ ವಿಭಜನೆ
3.3.2 ವಿಭಕ್ತಿ ಪ್ರತ್ಯಯಗಳು

ಅಭ್ಯಾಸ - 1
3.4 ವಚನಗಳು
3.5 ಲಿಂಗ

ಅಭ್ಯಾಸ - 2
3.6 ಕ್ರಿಯಾಪದ
3.6.1 ಪೂರ್ಣ ಕ್ರಿಯಾಪದ
3.6.2 ಕಾಲಗಳು

ಅಭ್ಯಾಸ - 3
3.7 ವಿಧಿಗಳು
3.8 ಅಪೂರ್ಣ ಕ್ರಿಯಾಪದ

ಅಭ್ಯಾಸ - 4
3.9 ಸಂಯುಕ್ತ ಕ್ರಿಯಾಪದ

ಅಭ್ಯಾಸ - 5
3.10 ಅವ್ಯಯ

ಅಭ್ಯಾಸ - 6
3.11 ಸಾರಾಂಶ
ಅಭ್ಯಾಸಗಳಿಗೆ ಉತ್ತರಗಳು


## 3.0 ಉದ್ದೇಶ

ಈ ಅಂಶವನ್ನು ಓದಿದ ಮೇಲೆ ನೀವು

- ವಾಕ್ಯದಲ್ಲಿ ಬಳಕೆಯಾಗುವ ಪದಗಳನ್ನು (ನಾಮಪದ, ಕ್ರಿಯಾಪದ, ಅವ್ಯಯಪದ) ಗುರುತಿಸುತ್ತೀರಿ.
- ನಾಮ ಲಕ್ಷಣಗಳನ್ನು ಗುರುತಿಸಿ ಅವು ಯಾ ನಾಮ ಪ್ರಕಾರಗಳಿಗೆ ಸೇರುವವು ಎಂಬುದನ್ನು ನಿರ್ಧರಿಸುವಿರಿ. ಆ ಪ್ರಕಾರ ನಾಮಪದ ರೂಪಗಳನ್ನು ರಚಿಸುವಿರಿ.
- ವಿಭಕ್ತಿ ಪ್ರತ್ಯಯಗಳ ಸರಿಯಾದ ಬಳಕೆಯನ್ನು ರೂಢಿಸಿಕೊಳ್ಳುವಿರಿ.
- ಏಕವಚನದ ಮತ್ತು ಬಹುವಚನದ ರೂಪಗಳನ್ನು ವಿಭಕ್ತಿ ಪ್ರತ್ಯಯಗಳನ್ನು ಬಳಸಿ ಹೇಳಬಲ್ಲಿರಿ ಹಾಗೂ ಬರೆಯಬಲ್ಲಿರಿ.
- ವಿವಿಧ ಕಾಲಗಳಲ್ಲಿರುವ ಪದಗಳನ್ನು ಗುರುತಿಸುವಿರಿ.
- ಕರ್ತೃವಿಗೆ ಸರಿಹೊಂದುವ ಕ್ರಿಯಾಪದಗಳನ್ನು, ಕ್ರಿಯಾಪದಕ್ಕೆ ಸರಿಹೊಂದುವ ಇತರ ಪದಗಳನ್ನು ನಿರ್ಧರಿಸುವಿರಿ.

## 3.1 ಪೀಠಿಕೆ

ಹಿಂದಿನ ಅಂಶದಲ್ಲಿ ನೀವು ಸರಿಯಾದ ಉಚ್ಚಾರಣೆ ಮತ್ತು ಬರವಣಿಗೆಯ ಬಗ್ಗೆ ತಿಳಿದುಕೊಂಡಿರಿ. ಅವುಗಳನ್ನು ಪದಗಳಲ್ಲಿ ಅಥವಾ ವಾಕ್ಯಗಳಲ್ಲಿ ಬಳಸಿದಾಗ ಮಾತ್ರ ಅವುಗಳ ಪ್ರಯೋಜನವಾಗುತ್ತದೆ. ಹಾಗೆ ಹೇಳಲು ಅಥವಾ ಬರೆಯಲು ಸರಿಯಾದ ಪದಗಳಿಂದ ಕೂಡಿದ ವಾಕ್ಯಗಳ ಅವಶ್ಯಕತೆ ಇದೆ. ಪದಗಳ ಹೊಂದಾಣಿಕೆಯಿಂದ ವಾಕ್ಯವಾಗುವುದು. ಹಾಗೆಂದು ಇಷ್ಟ ಬಂದಷ್ಟು ಪದಗಳನ್ನು ಹೇಗೆ ಹೇಗೋ ತುಂಬಿದರೆ ವಾಕ್ಯವಾಗದು. ವಾಕ್ಯ ರಚನೆಗೆ ನಿಯಮಗಳಿವೆ. ನಿರ್ದಿಷ್ಟ ರೀತಿಯ ಪದಗಳನ್ನು ಉಪಯೋಗಿಸಿದ ಹೊರತು ಅರ್ಥಪೂರ್ಣ ವಾಕ್ಯ ದೊರೆಯುವುದಿಲ್ಲ. ಈ ಉದ್ದೇಶಕ್ಕಾಗಿ ಪದಗಳನ್ನು ರಚಿಸಲು ಇರುವ ಕ್ರಮವನ್ನೂ ವಿಧಿಯನ್ನೂ ಈ ಅಂಶದಲ್ಲಿ ತಿಳಿದುಕೊಳ್ಳುವಿರಿ. ವಾಕ್ಯದಲ್ಲಿ ಮುಖ್ಯವಾಗಿ ಮೂರು ವಿಧದ ಪದಗಳು ಇರುತ್ತವೆ ಎಂಬುದನ್ನು ನೋಡುತ್ತೇವೆ. ಅವುಗಳನ್ನು ವಿವಿಧ ರೀತಿಯಲ್ಲಿ ವಿಂಗಡಿಸುವ ಕ್ರಮವನ್ನು ಈ ಅಂಶದಲ್ಲಿ ಚರ್ಚಿಸುತ್ತೇವೆ. ಆ ವಿಭಾಗಗಳನ್ನು ಹೇಗೆ ಕಂಡುಹಿಡಿಯಬೇಕು ; ಯಾವ ರೀತಿಯಲ್ಲಿ ಪದ ರಚಿಸಿದರೆ ಅರ್ಥ ಕೊಡುತ್ತದೆ ಮುಂತಾದವುಗಳನ್ನು ಇಲ್ಲಿ ಚರ್ಚಿಸಲಾಗಿದೆ. ಇನ್ನು ಒಂದೊಂದಾಗಿ ಇವುಗಳ ಬಗ್ಗೆ ತಿಳಿದುಕೊಳ್ಳೋಣ.

## 3.2 ಪದರಚನೆ

ಯಾವುದೇ ಒಂದು ವಾಕ್ಯವನ್ನು ಪರಿಶೀಲಿಸಿದಾಗ ಅದರಲ್ಲಿ ಮೂರು ವಿಧದ ಪದಗಳು ಇರುವುದು ಕಂಡುಬರುತ್ತದೆ. (1) ನಾಮಪದ (2) ಕ್ರಿಯಾಪದ (3) ಅವ್ಯಯ. ನಾಮಪದದಲ್ಲಿ ಯಾವುದೇ ಒಂದು ನಾಮವಿದ್ದು ಅದಕ್ಕೆ ವಿಭಕ್ತಿ ಪ್ರತ್ಯಯ ಹತ್ತಿಕೊಂಡಿರುತ್ತದೆ. ಕ್ರಿಯಾ ಪದದಲ್ಲಿ ಒಂದು ಧಾತುವಿದ್ದು ಅದಕ್ಕೆ ಕ್ರಿಯಾ ವಿಭಕ್ತಿ ಪ್ರತ್ಯಯ ಹತ್ತಿಕೊಂಡಿರುತ್ತದೆ. ಅವ್ಯಯಕ್ಕೆ ಯಾವ ವಿಭಕ್ತಿ ಪ್ರತ್ಯಯವೂ ಹತ್ತಿರುವುದಿಲ್ಲ. ಇವುಗಳನ್ನು ಒಂದೊಂದಾಗಿ ನೋಡೋಣ.

## 3.3 ನಾಮಪದ

ನಾಮಪದದಲ್ಲಿಯ ಮೂಲರೂಪಕ್ಕೆ ನಾಮವೆನ್ನುತ್ತಾರೆ. ನಾಮಕ್ಕೆ ವಿಭಕ್ತಿ ಪ್ರತ್ಯಯಗಳು ಸೇರಿ ನಾಮಪದವಾಗುತ್ತದೆ. ಉದಾಹರಣೆಗೆ ಒಂದು ವಾಕ್ಯ ನೋಡಿ :

ಅಂಗಳದಲ್ಲಿ ರಾಮನ ಮಗನು ಕೊಡಲಿಯಿಂದ ಕಟ್ಟಿಗೆಯನ್ನು ಕಡಿದು ಅಟ್ಟಕ್ಕೆ ತುಂಬುತ್ತಾನೆ.

ಈ ವಾಕ್ಯದಲ್ಲಿ ಒಟ್ಟು ಎಂಟು ಪದಗಳಿವೆ. ಕಡಿದು, ತುಂಬುತ್ತಾನೆ ಎಂಬ ಪದಗಳ ಮೂಲರೂಪಗಳಾದ 'ಕಡಿ', 'ತುಂಬು' ಗಳು ಕ್ರಿಯೆಯ ಅರ್ಥವನ್ನು ಸೂಚಿಸುವುದರಿಂದ ಅವು ಧಾತುಗಳು. ಉಳಿದ ಆರು ಪದಗಳಲ್ಲಿಯ ಮೂಲರೂಪವು ಒಂದು ವಸ್ತುವಿನ ಅಥವಾ ವ್ಯಕ್ತಿಯ ಹೆಸರು ಆಗಿದೆ. 'ಅಂಗಳ', 'ರಾಮ' 'ಮಗ', 'ಕೊಡಲಿ', 'ಕಟ್ಟಿಗೆ', 'ಅಟ್ಟ' ಈ ಮೂಲ ರೂಪಗಳಿಗೆ ನಾಮವೆಂದು ಹೆಸರು. ಅವುಗಳಿಗೆ ಅನುಕ್ರಮವಾಗಿ 'ಅಲ್ಲಿ, ಅ, ಉ, ಇಂದ, ಅನ್ನು ಕ್ಕೆ ಎಂಬ ವಿಭಕ್ತಿ ಪ್ರತ್ಯಯಗಳು ಸೇರಿವೆ. ನಾಮಕ್ಕೆ ವಿಭಕ್ತಿಪ್ರತ್ಯಯ ಸೇರಿ ನಾಮಪದಗಳಾಗುತ್ತವೆ. ವಾಕ್ಯದಲ್ಲಿ ಯಾವಾಗಲೂ ನಾಮಪದಗಳ ಬಳಕೆಯೇ ಇರುತ್ತದೆ. ನಾಮಗಳ ಬಳಕೆ ಕೆಲವೊಮ್ಮೆ ಕಂಡುಬರಬಹುದು. ಅಂದರೆ 'ದೇವಿ ಪ್ರತ್ಯಕ್ಷಳಾದಳು' 'ನಾನು ಹಣ್ಣು ತಿಂದೆ' ಇಲ್ಲಿ ದೇವಿಯು ಎಂದಿರಬೇಕಾದಲ್ಲಿ ಮೂಲ ರೂಪ 'ದೇವಿ' ಇದೆ. ಅದೇ ರೀತಿ ಹಣ್ಣನ್ನು ಎಂದಿರಬೇಕಾದಲ್ಲಿ ಮೂಲರೂಪ ಹಣ್ಣು ಎಂದಿದೆ. ಹೀಗೆ ಕೆಲವೊಮ್ಮೆ 'ಉ' ಅಥವಾ 'ಅನ್ನು' ಪ್ರತ್ಯಯವನ್ನು ಲೋಪ ಮಾಡುವ ರೂಢಿಯಿದೆ. ಆದರೆ ಇದರಂತೆ ಉಳಿದ ಪ್ರತ್ಯಯಗಳನ್ನು ಲೋಪ ಮಾಡುವುದಿಲ್ಲ.

ನಾಮಗಳನ್ನು ಅವುಗಳ ಅರ್ಥದ ಆಧಾರದ ಮೇಲೆ ವಸ್ತುವಾಚಕನಾಮ, ಸರ್ವನಾಮ, ವಿಶೇಷಣ, ಭಾವನಾಮ ಎಂದು ನಾಲ್ಕು ಗುಂಪಾಗಿ ವಿಂಗಡಿಸುತ್ತಾರೆ.

ವಸ್ತುವಾಚಕಗಳಲ್ಲಿ ರೂಢ, ಅನ್ವರ್ಥಕ, ಅಂಕಿತ ಎಂಬ ಮೂರು ಉಪಭೇದಗಳಿವೆ. ರೂಢನಾಮಗಳು ರೂಢಿಯಿಂದ ಬಂದಂಥವುಗಳು. ಮರ, ಮನೆ, ಹೊಲ ಇತ್ಯಾದಿ. ಅನ್ವರ್ಥಕ ನಾಮಗಳು ಎಂದರೆ ಯಾವುದಾದರೂ ಒಂದು ಗುರುತಿನಿಂದ ಸಂಕೇತಿಸುವಂಥವುಗಳು. ಉದಾಹರಣೆಗೆ ಕುರುಡ, ಕುಂಟ, ಮೂಕ, ಗಾಣಿಗ. ಅಂಕಿತನಾಮಗಳು ಎಂದರೆ ಮನುಷ್ಯರು ಇಟ್ಟ ಹೆಸರು. ರಾಮ, ಕೃಷ್ಣ ಸೀತೆ, ಕರಿಯ ಇತ್ಯಾದಿ. ಸರ್ವನಾಮಗಳು ಎಲ್ಲ ನಾಮಗಳ ಸ್ಥಳದಲ್ಲಿ ಬರುವಂಥವುಗಳು. ಒಂದು ವಾಕ್ಯದಲ್ಲಿ ಒಂದು ನಾಮವು ಬಂದಿದ್ದು ಅದನ್ನು ಸಂಕೇತಿಸಲು ಮುಂದಿನ ವಾಕ್ಯದಲ್ಲಿ ಸರ್ವನಾಮ ಬರುತ್ತದೆ. ನಾಮದ ಲಿಂಗ ವಚನಗಳನ್ನೇ ಅದು ಹೊಂದಿರುತ್ತದೆ. ಉದಾಹರಣೆಗೆ ಗೋವಿಂದನು ಮನೆಗೆ ಬಂದನು. ಅವನು ಊಟ ಮಾಡಿದನು. ಇಲ್ಲಿ ಅವನು ಎಂದರೆ ಗೋವಿಂದನು ಎಂದು ಅರ್ಥ. ಮೊದಲನೆಯ ವಾಕ್ಯದಲ್ಲಿ ನಾಮವಿರದಿದ್ದರೆ ಎರಡನೆ ವಾಕ್ಯದಲ್ಲಿಯ ಸರ್ವನಾಮಕ್ಕೆ ಅರ್ಥವಿಲ್ಲ. ಹೇಗೆಂದರೆ — ಮನೆಗೆ ಬಂದನು. ಅವನು ಊಟ ಮಾಡಿದನು. ಇಲ್ಲಿ ಅವನು ಎಂದರೆ ಯಾರು ಎಂಬುದು ಸ್ಪಷ್ಟವಾಗುವುದಿಲ್ಲ.

ಅಲ್ಲದೆ ಮೊದಲನೆಯ ವಾಕ್ಯದಲ್ಲಿಯೇ ಸರ್ವನಾಮವಿದ್ದು ನಂತರ ಬರುವ ವಾಕ್ಯದಲ್ಲಿ ನಾಮವಿದ್ದರೆ, ಎರಡೂ ವಾಕ್ಯಗಳು ಬೇರೆ ಬೇರೆ ವ್ಯಕ್ತಿಯನ್ನು ಸೂಚಿಸುತ್ತವೆ. ಉದಾಹರಣೆಗೆ ಅವನು ಊಟ ಮಾಡಿದನು. ಗೋವಿಂದನು ಮನೆಗೆ ಬಂದನು. ಇಲ್ಲಿ 'ಅವನು' ಸರ್ವನಾಮವು ಸೂಚಿಸುವ ವ್ಯಕ್ತಿ ಗೋವಿಂದನಿಂದ ಬೇರೆಯಾದ ವ್ಯಕ್ತಿ ಎಂಬ ಅರ್ಥ ಬರುತ್ತದೆ.

ವಿಶೇಷಣಗಳು ವಸ್ತುವನ್ನು ಅವುಗಳ ಗುಣ, ಸಂಖ್ಯೆ ಪರಿಮಾಣಗಳಿಂದ ವರ್ಣಿಸುತ್ತವೆ. ಉದಾಹರಣೆಗೆ ಎಳೆ ಮರ ಎಂಬಲ್ಲಿ ಎಳೆಯ ಎಂಬುದು ಮರದ ಗುಣವನ್ನು ಹೇಳುವಂಥ ವಿಶೇಷಣ. ಎರಡು ಹಕ್ಕಿ ಎಂಬಲ್ಲಿ 'ಎರಡು' ಎಂಬುದು ಸಂಖ್ಯೆಯಿಂದ, ಅಷ್ಟು ಮಂದಿ ಎಂಬಲ್ಲಿ ಅಷ್ಟು ಎಂಬುದು ಪರಿಮಾಣದಿಂದ ತಮ್ಮ ಮುಂದಿನ ನಾಮವನ್ನೇ ವರ್ಣಿಸುತ್ತವೆ. ಮುಂದೆ ಬಂದ ಪದಕ್ಕೆ ಅಂದರೆ ವರ್ಣಿಸಿಕೊಳ್ಳುವ ಪದಕ್ಕೆ ವಿಶೇಷ್ಯವೆನ್ನುತ್ತಾರೆ.

ಭಾವನಾಮಗಳು ಗುಣಧರ್ಮ ಅಥವಾ ಕ್ರಿಯೆಯನ್ನು ಸೂಚಿಸುತ್ತವೆ. ಉದಾಹರಣೆಗೆ ಚೆಲುವಿಕೆ, ಬಾಳಿಕೆ, ಶೌರ್ಯ, ಸೌಂದರ್ಯ ಮೊದಲಾದವುಗಳು ಭಾವನೆಗೆ ಮಾತ್ರ ಗೋಚರವಾಗುವಂಥ ನಾಮಗಳು.

ಅರ್ಥದ ಆಧಾರದ ಮೇಲೆ ನಾಮಗಳನ್ನು ಮೇಲೆ ತೋರಿಸಿದಂತೆ ವಿಭಾಗಿಸಬಹುದಾದಂತೆ ವ್ಯಾಕರಣ ಪ್ರಕ್ರಿಯೆಯ ದೃಷ್ಟಿಯಿಂದಲೂ ಅವುಗಳನ್ನು ವಿಭಾಗಿಸಬಹುದು.

## 3.3.1 ನಾಮಗಳ ವಿಭಜನೆ

ವ್ಯಾಕರಣ ಪ್ರಕ್ರಿಯೆಯ ದೃಷ್ಟಿಯಿಂದ ನಾಮಗಳನ್ನು ನಾಲ್ಕು ವಿಭಾಗಗಳಲ್ಲಿ ವಿಂಗಡಿಸಬಹುದು.

(1) 'ಅ' ಸ್ವರದಿಂದ ಕೊನೆಗೊಳ್ಳುವಂಥವು: ರಾಮ, ಹೊಲ ಮಗ, ದನ

(2) 'ಇ' ಸ್ವರದಿಂದ ಕೊನೆಗೊಳ್ಳುವಂಥವು: ಗಿಳಿ, ತಂಗಿ, ಮರಿ, ತಾಯಿ

(3) 'ಎ' ಸ್ವರದಿಂದ ಕೊನೆಗೊಳ್ಳುವಂಥವು: ತಂದೆ, ಜಡೆ, ಬಂಡೆ, ಸೀತೆ

(4) 'ಉ' ಸ್ವರದಿಂದ ಕೊನೆಗೊಳ್ಳುವಂಥವು: ಗುರು, ಆಳು, ವಸ್ತು, ಗುಟ್ಟು

ಪ್ರತ್ಯಯಗಳನ್ನು ತೆಗೆದುಕೊಳ್ಳುವಾಗ ಇವು ಐದು ಗುಂಪುಗಳಲ್ಲಿ ಬೀಳುತ್ತವೆ.

ಗುಂಪು 1: 'ಅ' ದಿಂದ ಕೊನೆಗೊಳ್ಳುವಂಥ, ಮಾನವರನ್ನು ಸೂಚಿಸುವ ನಾಮಗಳು.
ಉದಾಹರಣೆಗೆ ರಾಮ, ಕೃಷ್ಣ ಬಸವ
ಗುಂಪು 2: 'ಅ' ದಿಂದ ಕೊನೆಗೊಳ್ಳುವಂಥ, ಮಾನವೇತರ ನಾಮಗಳು
ಉದಾಹರಣೆಗೆ ಹೊಲ, ದನ, ಕರ
ಗುಂಪು: 3'ಇ' ಮತ್ತು 'ಎ' ದಿಂದ ಕೊನೆಗೊಳ್ಳುವ ಎಲ್ಲ ನಾಮಗಳು
ಗುಂಪು: 4'ಉ' ದಿಂದ ಕೊನೆಗೊಳ್ಳುವ, ಆದರೆ ಹಿಂದಿನ ಅಕ್ಷರದಲ್ಲಿ ಹ್ರಸ್ವಸ್ವರವಿರುವ ಅಥವಾ ವಿಜಾತಿ ಸಂಯುಕ್ತಾಕ್ಷರಗಳಿರುವ ನಾಮಗಳು
ಉದಾಹರಣೆಗೆ ಹಸು, ಗುರು, ವಸ್ತು, ಶಿಸ್ತು
ಗುಂಪು: 5'ಉ' ದಿಂಧ ಕೊನೆಗೊಳ್ಳುವ ಆದರೆ ಹಿಂದಿನ ಅಕ್ಷರದಲ್ಲಿ ದೀರ್ಘಸ್ವರವಿರುವ ಅಥವಾ ಸಜಾತಿ ಸಂಯುಕ್ತಾಕ್ಷರವಿರುವ ನಾಮಗಳು
ಉದಾಹರಣೆಗೆ ಆಳು ಬಾಳು, ಗುಟ್ಟು, ತಟ್ಟು

ಉರ್ದು ಮೊದಲಾದ ಭಾಷೆಯಿಂದ ಅಥವಾ ಸಂಸ್ಕೃತದಿಂದ ಎರವಲಾಗಿ ಬಂದು ಕನ್ನಡೀಕರಣಗೊಂಡ ಯಾವುದೇ ಪದ ಮೇಲಿನ ಐದು ಗುಂಪುಗಳಲ್ಲಿ ಯಾವುದಕ್ಕೆ ಹೊಂದಿಕೊಳ್ಳುತ್ತದೆ ಎಂಬುದನ್ನು ವಿಚಾರಿಸಿ ಆಯಾ ನಾಮದ ವಿಭಕ್ತಿ ರೂಪಗಳನ್ನು ಅರಿಯಬಹುದು.

## 3.3.2 ವಿಭಕ್ತಿ ಪ್ರತ್ಯಯಗಳು

ಕನ್ನಡದಲ್ಲಿ ಸಾಮಾನ್ಯವಾಗಿ ಎಂಟು ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಲಾಗಿದೆ. ನಾಮಗಳಿಗೆ ವಿಭಕ್ತಿ ಪ್ರತ್ಯಯಗಳು ಸೇರಿದಾಗ ನಾಮಪದಗಳಾಗುತ್ತವೆ ಎಂಬುದನ್ನು ನೋಡಿದ್ದೇವೆ. ವಿಭಕ್ತಿ ಪ್ರತ್ಯಯಗಳು ಒಂದೊಂದು ಅರ್ಥದಲ್ಲಿ ಸೇರುತ್ತವೆ. ವಾಕ್ಯದಲ್ಲಿ ನಾಮಪದದ ಕಾರ್ಯವನ್ನು ಅವಲಂಬಿಸಿಕೊಂಡು ವಿಭಕ್ತಿ ಪ್ರತ್ಯಯಗಳು ಸೇರುತ್ತವೆ. ಎಂಟು ವಿಭಕ್ತಿ ಪ್ರತ್ಯಯಗಳು ಈ ಪ್ರಕಾರ ಇವೆ.

| | |
|---|---|
| (1) ಪ್ರಥಮಾ ವಿಭಕ್ತಿ | ಉ |
| (2) ದ್ವಿತೀಯಾ ವಿಭಕ್ತಿ | ಅನ್ನು |
| (3) ತೃತೀಯಾ ವಿಭಕ್ತಿ | ಇಂದ |
| (4) ಚತುರ್ಥೀ ವಿಭಕ್ತಿ | ಗೆ, ಇಗೆ, ಕ್ಕೆ ಅಕ್ಕೆ |

(5) ಪಂಚಮೀ ವಿಭಕ್ತಿ ಇಂದ
(6) ವಿಭಕ್ತಿ ಅ
(7) ಸಪ್ತಮೀ ವಿಭಕ್ತಿ ಅಲ್ಲಿ, ಒಳಗೆ
(8) ಸಂಬೋಧನಾ ವಿಭಕ್ತಿ ಏ, ಆ

ಮೇಲಿನ ವಿಭಕ್ತಿ ಪ್ರತ್ಯಯಗಳನ್ನು ಕುರಿತು ಕೆಲವು ವಿಷಯಗಳನ್ನು ತಿಳಿದಿರುವುದು ಅವಶ್ಯಕವಿದೆ.

(1) ಪ್ರಥಮಾ ವಿಭಕ್ತಿ ಪ್ರತ್ಯಯ ಅನೇಕ ಕಡೆಗಳಲ್ಲಿ ಲೋಪವೂ ಆಗಬಹುದು. ಉದಾಹರಣೆಗೆ, ರಾಮನು, ಅಥವಾ ರಾಮ, ಹೊಲವು ಅಥವಾ ಹೊಲ, ಗಿಳಿಯು ಅಥವಾ ಗಿಳಿ, ತಂದೆಯು ಅಥವಾ ತಂದೆ ಹೀಗೆ.

(2) ದ್ವಿತೀಯಾ ವಿಭಕ್ತಿ ಪ್ರತ್ಯಯ ಮಾನವೇತರ ನಾಮಗಳ ಮೇಲೆ ಕೆಲವೊಮ್ಮೆ ಲೋಪವಾಗಬಹುದು. ಹೇಗೆಂದರೆ ಹುಡುಗನು ಹಕ್ಕಿಯನ್ನು ಹೊಡೆದ ಅಥವಾ ಹುಡುಗ ಹಕ್ಕಿ ಹೊಡೆದ. ರೈತನು ಹೊಲವನ್ನು ಕೊಂಡ ಅಥವಾ ರೈತ ಹೊಲ ಕೊಂಡ, ಆದರೆ ಮಾನವರನ್ನು ಸೂಚಿಸುವ ನಾಮಗಳ ಮೇಲೆ ಹೀಗೆ ಲೋಪವಾಗುವುದಿಲ್ಲ. ತಾಯಿ ಮಗನನ್ನು ಕರೆದಳು, ಇದು ತಾಯಿ ಮಗ ಕರೆದಳು ಎಂದಾಗಲೆ; ಮಗಳು ತಂದೆಯನ್ನು ಕೇಳಿದಳು, ಇದು ಮಗಳು ತಂದೆ ಕೇಳಿದಳು ಎಂದಾಗಲಿ ಆಗುವುದಿಲ್ಲ.

(3) ತೃತೀಯಾ ವಿಭಕ್ತಿ ಮತ್ತು ಪಂಚಮೀ ವಿಭಕ್ತಿ ಎರಡೂ ಒಂದೇ 'ಇಂದ' ಪ್ರತ್ಯಯವನ್ನು ಹೊಂದಿವೆ. ಆದರೂ ವಿಭಕ್ತಿ ಭೇದ ಹೇಗೆ ಎಂಬ ಪ್ರಶ್ನೆ ಬರಬಹುದು. ಯಾವುದೇ ಕ್ರಿಯೆಗೆ ಸಾಧನವಾಗಿರುವುದನ್ನು ಸೂಚಿಸುವಾಗ ಬರುವ ಇಂದ ತೃತೀಯಾ ಎಂದೂ ಅಗಲಿಕೆಯನ್ನು ಅಥವಾ ದೂರವಿರುವಿಕೆಯನ್ನು ಹೇಳುವಾಗ ಬರುವ ಇಂದ ಪಂಚಮೀ ಎಂದೂ ತಿಳಿಯಬೇಕು.

ಕೊಡಲಿಯಿಂದ ಮರ ಕಡಿದ (ಕೊಡಲಿ ಸಾಧನವಾಗಿದೆ)
ಕೈಯಿಂದ ಭಾರ ಎತ್ತಿದ (ಕೈ ಸಾಧನವಾಗಿದೆ)

ಇವು ತೃತೀಯ ವಿಭಕ್ತಿ ಎಂದೂ,

ಮರದಿಂದ ಹಣ್ಣು ಬಿತ್ತು (ಅಗಲಿಕೆಯ ಸೂಚನೆಇದ)
ಮನೆಯಿಂದ ಆಫೀಸು ಐದು ಮೈಲು (ದೂರದ ಸೂಚನೆ ಇದೆ)

ಇವು ಪಂಚಮೀ ವಿಭಕ್ತಿ ಎಂದೂ ತಿಳಿಯಬೇಕು.

(4) ಚತುರ್ಥೀ ವಿಭಕ್ತಿಗೆ ನಾಲ್ಕು ರೂಪಗಳಿವೆ. ಗೆ, ಇಗೆ, ಕ್ಕೆ ಅಕ್ಕೆ ಇವುಗಳು ನಿಯಮಬದ್ಧವಾಗಿ ಬರುತ್ತವೆ ಅಂದರೆ ಇ ಮತುತೆ ಕಾರಾಂತ ನಾಮಗಳ ಮೇಲೆ ಬರುತ್ತದೆ. ಉದಾಹರಣೆಗೆ, ನದಿಗೆ, ಮನೆಗೆ; ಉಕಾರಾಂತ ನಾಮಗಳ ಮೇಲೆಇಗೆ ಬರುತ್ತದೆ. ಉದಾಹರಣೆಗೆ ಗುರುವಿಗೆ, ಆಳಿಗೆ; ಅ ಕಾರಾಂತ ಮಾನವೇತರ ನಾಮಗಳ ಮೇಲೆ ಕ್ಕೆ ಬರುತ್ತದೆ. ಉದಾಹರಣೆಗೆ ಹೊಲಕ್ಕೆ ಮರಕ್ಕೆ; ಅದು, ಇದು ಸರ್ವನಾಮಗಳ ಮೇಲೆ ಮತ್ತು ಸಂಖ್ಯಾವಾಚಕಗಳ ಮೇಲೆ ಅಕ್ಕೆ ಬರುತ್ತದೆ. ಉದಾಹರಣೆಗೆ ಅದಕ್ಕೆ ಒಂದಕ್ಕೆ ಹೀಗೆ

(5) ಸಪ್ತಮೀ ವಿಭಕ್ತಿಗೂ ಎರಡು ರೂಪಗಳಿವೆ. ಅಲ್ಲಿ,ಒಳಗೆ. ಆದರೆ ಇವುಗಳು ನಿಯಮಗಳೇನಿಲ್ಲದೆ ಎಲ್ಲೆಡೆಗೂ ಬರುವ ವಿವಿಧ ರೂಪಗಳಾಗಿವೆ. ಮನೆಯಲ್ಲಿ, ಮನೆಯೊಳಗೆ ; ರಾಮನಲ್ಲಿ, ಕರುವಿನಲ್ಲಿ, ಕರುವಿನೊಳಗೆ ; ನದಿಯಲ್ಲಿ ಹೀಗೆ.

(6) ಸಂಬೋಧನಾ ವಿಭಕ್ತಿಯೂ ಎರಡು ರೂಪದಲ್ಲಿದೆ. ಏ, ಆ. ಉದಾಹರಣೆಗೆ ರಾಮನೇ, ರಾಮಾ ; ಸೀತೆಯೇ, ಸೀತಾ, ಸರ್ವನಾಮಗಳಿಗೂ, ಇತರ ಕೆಲವು ನಾಮಗಳಿಗೂ ಸಂಬೋಧನಾ ರೂಪವಿಲ್ಲ.

## ಅಭ್ಯಾಸ - 1

(1) ಹಿಂದೆ ಹೇಳಿದ ಲಕ್ಷಣಗಳ ಪ್ರಕಾರ ಕೆಳಗಿನ ನಾಮಗಳು ಯಾವ ಗುಂಪಿಗೆ ಸೇರುತ್ತವೆ ಎಂಬುದನ್ನು ಸಂಖ್ಯೆಯಿಂದ ಅವುಗಳ ಮುಂದೆ ಗುರುತಿಸಿರಿ.

| ಗುಂಪು | | ಗುಂಪು | | ಗುಂಪು | |
|---|---|---|---|---|---|
| ದನ | ........................., | ಅಭಿಮಾನ | ......................, | ತಂದೆ | ......................... |
| ವ್ಯಾಕರಣ | ......................, | ಮರ್ಯಾದೆ | ......................, | ಹಂದಿ | ......................... |
| ಅಣ್ಣ | ........................., | ಅಕ್ಕ | ......................, | ತಂಗಿ | ......................... |
| ಬಣ್ಣ | ........................., | ಶಿಸ್ತು | ......................, | ಆಳು | ......................... |
| ಮಗು | ........................., | ಮರಿ | ......................, | ತಟ್ಟು | ......................... |

(2) ಕೆಳಗೆ ಕೊಟ್ಟಂತೆ ಗುಂಪಿನಡಿ ಅಲ್ಲಿ ಸೇರುವ ನಾಮಗಳನ್ನು ಬರೆಯಿರಿ.

| ಗುಂಪು 1 | ಗುಂಪು 2 | ಗುಂಪು 3 | ಗುಂಪು 4 | ಗುಂಪು 5 |
|---|---|---|---|---|
| .................. | .................. | .................. | .................. | .................. |
| .................. | .................. | .................. | .................. | .................. |
| .................. | .................. | .................. | .................. | .................. |
| .................. | .................. | .................. | .................. | .................. |

(3) ಕೆಳಗಿನ ನಾಮಗಳಿಗೆ ಯಾವ ವಿಭಕ್ತಿ ಪ್ರತ್ಯಯ ಸೇರಿದೆ ಎಂಬುದನ್ನು ಗುರುತಿಸಿರಿ.

ಕೊಳದಲ್ಲಿ ........................ ಮಧ್ಯಾಹ್ನದಿಂದ ...................... ಜಂಗಮನಿಗೆ ....................
ಹಣವನ್ನು ........................ ಗುಣದಲ್ಲಿ ...................... ಹಲ್ಲಿನಿಂದ ....................
ಗುಣವು ........................ ಮನವನ್ನು ...................... ಮೂರಕ್ಕೆ ....................
ವರ್ಷದಿಂದ ........................ ಹುಡುಗನೇ ...................... ಮರದ ....................
ಬಳಿಯ ........................ ಆಕಾಶದೊಳಗೆ ...................... ಮಗುವಿಗೆ ....................

(4) ಕೆಳಗಿನ ಪದಗಳಲ್ಲಿ ವಿಭಕ್ತಿ ಪ್ರತ್ಯಯ ಸೇರುವಾಗ ದೋಷಗಳಾಗಿವೆ. ಅವುಗಳ ಶುದ್ಧ ರೂಪವನ್ನು ಬರೆಯಿರಿ.

ಗುರುಗೆ ........................ ಮರದನ್ನು ...................... ಅಭಿಮಾನವೊಳಗೆ ....................
ಆಳುವಿಗೆ ........................ ವಸ್ತುಗೆ ...................... ದಿಕ್ಕುವಿಗೆ ....................
ಕಾಲನ್ನು ........................ ಮಂದಿರವಲ್ಲಿ ...................... ಹಂದರವಲ್ಲಿ ....................

(5) ಅಭ್ಯಾಸ (2) ರಲ್ಲಿ ನೀವು ಬರೆದ ಶಬ್ದಗಳನ್ನು ಎತ್ತಿಕೊಂಡು ಕೆಳಗೆ ಸೂಚಿಸಿದ ವಿಭಕ್ತಿ ಪ್ರತ್ಯಯ ಸೇರಿಸಿ ಅವುಗಳನ್ನು ಬರೆಯಿರಿ.

| | | | | |
|---|---|---|---|---|
| ಪ್ರಥಮಾ | .................. | .................. | .................. | .................. |
| ದ್ವಿತೀಯಾ | ............ | .. | ... | ... |
| ತೃತೀಯಾ | .................. | .................. | .................. | .................. |
| ಚತುರ್ಥಿ | .................. | .................. | .................. | .................. |
| ಪಂಚಮೀ | .................. | .................. | .................. | .................. |
| ಷಷ್ಠೀ | .................. | .................. | .................. | .................. |
| ಸಪ್ತಮೀ | ............ | .. | ... | ... |
| ಸಂಬೋಧನಾ | .................. | .................. | .................. | .................. |

## 3.4 ವಚನಗಳು

ಕನ್ನಡದಲ್ಲಿ ವಚನಗಳು ಎರಡು. ಏಕವಚನ ಮತ್ತು ಬಹುವಚನ. ಒಂದಕ್ಕಿಂತ ಹೆಚ್ಚು ಎಂದು ಸೂಚಿಸುವಾಗ ಬಹುವಚನ ಪ್ರತ್ಯಯ ಸೇರಿಸುತ್ತಾರೆ. ಯಾವ ಬಹುವಚನ ಪ್ರತ್ಯಯವೂ ಸೇರಿರದಿದ್ದರೆ ಅದು ಏಕವಚನದಲ್ಲಿದೆ ಎಂದು ತಿಳಿಯಬೇಕು. ಬಹುವಚನ ಪ್ರತ್ಯಯಗಳು ನಾಮಗಳಿಗೆ ವಿಭಕ್ತಿ ಪ್ರತ್ಯಯ ಸೇರುವ ಮೊದಲು ಸೇರುತ್ತವೆ. ಹೇಗೆಂದರೆ :

ಹಣ್ಣನ್ನು (ಏಕವಚನ) - ಹಣ್ಣು + ಗಳ್ + ಅನ್ನು (ಬಹುವಚನ) ಇಲ್ಲಿ ಗಳ್ ಎಂಬುದು ಬಹುವಚನ ಪ್ರತ್ಯಯ. ಅನ್ನು ಎಂಬ ದ್ವಿತೀಯಾ ವಿಭಕ್ತಿ ಪ್ರತ್ಯಯ ಸೇರುವ ಮೊದಲು ಅದು ಸೇರಿಸದೆ ಎಂಬುದನ್ನು ಗಮನಿಸಬೇಕು. ಗಳ್ ಪ್ರತ್ಯಯದಂತೆ ಅರ್, ಅಂದಿರ್ ಕೂಡ ಬಹುವಚನ ಪ್ರತ್ಯಯವಾಗಿ ಬರುತ್ತದೆ. ಇವುಗಳು ಬರುವ ವಿಧಾನವನ್ನು ನೋಡೋಣ.

(1) ಅ ಕಾರಾಂತ ಪುಲ್ಲಿಂಗ ನಾಮಗಳ ಮುಂದೆ ಮತ್ತು ಇ, ಈ ಎ ಕಾರಾಂತ ಸ್ತ್ರೀಲಿಂಗ ನಾಮಗಳ ಮುಂದೆ ಅರ್ ಪ್ರತ್ಯಯ ಬರುತ್ತದೆ. ಉದಾಹರಣೆಗೆ ಮನುಷ್ಯ — ಮನುಷ್ಯರು ; ಕುರುಡ — ಕುರುಡರು ; ಹೆಂಡತಿ — ಹೆಂಡತಿಯರು ; ಸ್ತ್ರೀ — ಸ್ತ್ರೀಯರು ; ಸೊಸೆ — ಸೊಸೆಯರು ಇತ್ಯಾದಿ.

(2) ಸಂಬಂಧವಾಚಕ ಶಬ್ದಗಳ ನಂತರ ಅಂದಿರ್ ಪ್ರತ್ಯಯ ಸೇರುತ್ತದೆ. ಉದಾಹರಣೆಗೆ ತಾಯಿ — ತಾಯಿಯಂದಿರು ; ಅಕ್ಕ—ಅಕ್ಕಂದಿರು ; ಅಣ್ಣ — ಅಣ್ಣಂದಿರು ; ಗಂಡ — ಗಂಡಂದಿರು. (ಕೆಲವೊಮ್ಮೆ ತಂದೆಗಳು, ತಾಯಿಗಳು ಎಂದಾಗುತ್ತದೆ. ಆದರೆ ಇದು ವಿರಳ)

(3) ಉಳಿದ ಕಡೆಗೆಲ್ಲ ಅಂದರೆ ಅ ಕಾರಾಂತ ನಪುಂಸಕ ನಾಮಗಳು, ಇ, ಎ, ಕಾರಾಂತ, ಪುಲ್ಲಿಂಗ ಮತ್ತು ನಪುಂಸಕ ನಾಮಗಳು, ಉ ಕಾರಾಂತ ಎಲ್ಲ ನಾಮಗಳ ಮುಂದೆ ಗಳ್ ಪ್ರತ್ಯಯ ಬರುತ್ತದೆ. (ಅ ಕಾರಾಂತ

ಸ್ತ್ರೀಲಿಂಗ ಶಬ್ದಗಳು ಕನ್ನಡದಲ್ಲಿ ಇಲ್ಲವೆಂಬುದನ್ನು ಗಮನಿಸಬೇಕು). ಉದಾಹರಣೆಗೆ ಹೊಲ — ಹೊಲಗಳು ; ದನ — ದನಗಳು ; ಕಲೆ — ಕಲೆಗಳು ; ತಂದೆ — ತಂದೆಗಳು ; ಗುರು — ಗುರುಗಳು ; ಆಳು — ಆಳುಗಳು ; ವಸ್ತು — ವಸ್ತುಗಳು

(4) ಮಗನು, ಮಗಳು, ಮತ್ತು ಮಗು ಶಬ್ದಗಳಿಗೆ ಒಂದೇ ಬಹುವಚನ ರೂಪವಿದೆ. ಅದು 'ಮಕ್ಕಳು' ಎಂದು.

ಮೇಲಿನ ಚರ್ಚೆಯಲ್ಲಿ ಬಹುವಚನದ ಎಲ್ಲ ರೂಪಗಳನ್ನು ಪ್ರಥಮಾ ವಿಭಕ್ತಿಯಲ್ಲಿ ತೋರಿಸಿದೆ. ಪ್ರಥಮಾ ವಿಭಕ್ತಿ ಬಂದಂತೆ ಉಳಿದ ವಿಭಕ್ತಿ ಪ್ರತ್ಯಯಗಳೂ ಬರಬಲ್ಲವು. ಉದಾಹರಣೆಗೆ ಕೆಳಗೆ ಎರಡು ನಾಮಪದಗಳನ್ನು ಎಲ್ಲ ವಿಭಕ್ತಿಗಳಲ್ಲಿ ತೋರಿಸಿದೆ.

| | ಗುರು | | ಮರ | |
|---|---|---|---|---|
| | ಏ.ವ | ಬ.ವ | ಏ.ವ | ಬ.ವ |
| ಪ್ರ | ಗುರು, ಗುರುವು | ಗುರುಗಳು, | ಮರ, ಮರವು | ಮರಗಳು |
| ದ್ವಿ | ಗುರುವನ್ನು | ಗುರುಗಳನ್ನು | ಮರ, ಮರವನ್ನು | ಮರಗಳನ್ನು |
| ತೃ | ಗುರುವಿಂದ, ಗುರುವಿನಿಂದ | ಗುರುಗಳಿಂದ, | ಮರದಿಂದ | ಮರಗಳಿಂದ |
| ಚ | ಗುರುವಿಗೆ | ಗುರುಗಳಿಗೆ, | ಮರಕ್ಕೆ | ಮರಗಳಿಗೆ. |
| ಪಂ | ಗುರುವಿನಿಂದ | ಗುರುಗಳಿಂದ, | ಮರದಿಂದ | ಮರಗಳಿಂದ |
| ಷ | ಗುರುವಿನ | ಗುರುಗಳ, | ಮರದ | ಮರಗಳ |
| ಸ | ಗುರುವಿನಲ್ಲಿ | ಗುರುಗಳಲ್ಲಿ, | ಮರದಲ್ಲಿ | ಮರಗಳಲ್ಲಿ |
| ಸಂ | ಗುರುವೇ | ಗುರುಗಳೇ. | ಮರವೇ | ಮರಗಳೇ. |

## 3.5 ಲಿಂಗ

ಕನ್ನಡದಲ್ಲಿ ಮೂರು ಲಿಂಗಗಳಿವೆ. ಮನುಷ್ಯರಲ್ಲಿಯ ಗಂಡು **ಪುಲ್ಲಿಂಗ**ವೆಂದೂ, ಹೆಣ್ಣು ಸ್ತ್ರೀಲಿಂಗವೆಂದೂ, ಉಳಿದುದೆಲ್ಲ **ನಪುಂಸಕಲಿಂಗ**ವೆಂದೂ ಸಂಕೇತಿಸಲಾಗುತ್ತದೆ. ನಾಮಪದ ರಚನೆಯಲ್ಲಿ ಈ ಲಿಂಗ ಭೇದ ಸೂಚಿತವಾಗುವುದಿಲ್ಲ. ಕ್ರಿಯಾ ವಿಭಕ್ತಿ ಪ್ರತ್ಯಯಗಳ ಆಯ್ಕೆಯಲ್ಲಿ ಇದು ಮಹತ್ವದ ಪಾತ್ರ ವಹಿಸುತ್ತದೆ.

ಅವನು ಹೋಗುತ್ತಾನೆ
ಅವಳು ಹೋಗುತ್ತಾಳೆ
ಅದು ಹೋಗುತ್ತದೆ

ಇಲ್ಲಿ — ಆನೆ, — ಆಳೆ, — ಅದೆ ಎಂಬ ಕ್ರಿಯಾ ವಿಭಕ್ತಿ ಪ್ರತ್ಯಯಗಳ ಆಯ್ಕೆ ಅನುಕ್ರಮವಾಗಿ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ ಸರ್ವನಾಮಗಳ ಮೇಲೆ ಅವಲಂಬಿಸಿದೆ. ಇತ್ತೀಚಿನ ಕೆಲವು ಬರವಣಿಗೆಗಳಲ್ಲಿ ಪುಲ್ಲಿಂಗ ನಾಮಕ್ಕೆ — ನು (ರಾಮನು) ಸೇರಿದಂತೆ ಸ್ತ್ರೀಲಿಂಗ ನಾಮಕ್ಕೆ — ಳು ಸೇರಿಸುವ ರೂಢಿ ಬರುತ್ತಿದೆ.
ಉದಾ : (ಸೀತಾಳು).
ಅದೇ ರೀತಿ ನಪುಂಸಕ ಲಿಂಗಕ್ಕೆ — ವು ಅಥವಾ — ಯು ಸೇರುತ್ತದೆ. (ಕತ್ತೆಯು; ಹೊಲವು ಅಂದಂತೆ) ಆದರೆ ಪುಲ್ಲಿಂಗದ ಹಾಗೂ ನಪುಂಸಕಲಿಂಗದ ಪ್ರತಿಕ್ರಿಯೆಗಳನ್ನು ಸ್ವಾಭಾವಿಕವಾಗಿ ಸ್ವೀಕರಿಸಿದಂತೆ ಸ್ತ್ರೀಲಿಂಗದ ರೂಪಗಳನ್ನು ಶಿಷ್ಟಭಾಷೆಯು ಸ್ವೀಕರಿಸಿಲ್ಲ. ನಮ್ಮ ವೈಯಾಕರಣರು, ಅದರಲ್ಲೂ ಕೇಶಿರಾಜನು, ಈ ಮೂರು ಲಿಂಗಗಳಲ್ಲದೆ, ಪುಂಸ್ತ್ರೀ, ಸ್ತ್ರೀನಪುಂಸಕ, ಪುನ್ನಪುಂಸಕ, ಸಮಸ್ತ, ವಾಚ್ಯ ಅವ್ಯಯ ಎಂದು ಇನ್ನೂ ಆರು ಲಿಂಗ ಭೇದಗಳನ್ನು ಹೇಳಿದ್ದಾನೆ ವ್ಯಾಕರಣ ಪ್ರತಿಕ್ರಿಯೆಯ ದೃಷ್ಟಿಯಿಂದ ಮೊದಲು ಹೇಳಿದ ಮೂರು ಲಿಂಗಗಳು ಕನ್ನಡಕ್ಕೆ ಸಾಕು. ಉಳಿದ ಆರು ಲಿಂಗಗಳು ಅರ್ಥದ ದೃಷ್ಟಿಯಿಂದ ಏರ್ಪಟ್ಟವುಗಳು.

# ಅಭ್ಯಾಸ - 2

(ಅ) ಇದೇ ಪ್ರಕಾರ ಬೇರೆ ಎರಡು ಶಬ್ದಗಳ ರೂಪಗಳನ್ನು ಬರೆಯಿರಿ.

| | ........................ | | ........................ | |
|---|---|---|---|---|
| | ಏ.ವ | ಬ.ವ | ಏ.ಏ.ಏ | ಬ.ವ |
| ಪ್ರ | ........................ | ........................ | ........................ | ........................ |
| ದ್ವಿ | ........................ | ........................ | ........................ | ........................ |
| ತೃ | ........................ | ........................ | ........................ | ........................ |
| ಚ | ........................ | | | |

.......

| | | | | |
|---|---|---|---|---|
| ಪುಂ | ..................... | ..................... | ..................... | ..................... |
| ಪ | ..................... | ..................... | ..................... | ..................... |
| ಸ | ..................... | ..................... | ..................... | ..................... |
| ಸು | ..................... | ..................... | ..................... | ..................... |

**(ii) ಕೆಳಗಿನ ಪದಗಳ ಲಿಂಗಗಳನ್ನು ಹೇಳಿರಿ.**

**ಸೀತೆ (　　　), ನಾಯಿ (　　　), ಮರ (　　　),**
**ಆಕಾಶ (　　　), ಸಿಟ್ಟು (　　　), ಕುರುಡ (　　　),**
**ಕಳ್ಳಯ್ಯ (　　　), ಕವಿತೆ (　　　), ರೂಪವಂತೆ (　　　);**
**ಮಂದಾರಮಲ್ಲಿಗೆ (　　　) ಗಾಳಿ (　　　), ಕೋಲ್ಮಿಂಚು (　　　),**

## 3.6 ಕ್ರಿಯಾಪದ

ಕ್ರಿಯಾಪದದ ಮೂಲರೂಪಕ್ಕೆ **ಧಾತು**ವೆನ್ನುತ್ತಾರೆ. ಧಾತುವು ಕ್ರಿಯೆಯ ಅರ್ಥವನ್ನು ಕೊಡುತ್ತಿರುತ್ತದೆ. ಸಾಮಾನ್ಯವಾಗಿ ಕ್ರಿಯಾಪದದಲ್ಲಿ ಒಂದು ಧಾತುವಿರುತ್ತದೆ, ಅಂಥ ಕ್ರಿಯಾಪದಗಳಿಗೆ ಸರಳ ಕ್ರಿಯಾಪದವೆನ್ನುತ್ತಾರೆ. ಕೆಲವೊಮ್ಮೆ ಒಂದಕ್ಕಿಂತ ಹೆಚ್ಚು ಧಾತುಗಳು ಇರುವುದೂ ಉಂಟು. ಅಂಥ ಕ್ರಿಯಾಪದಗಳಿಗೆ **ಸಂಯುಕ್ತ ಕ್ರಿಯಾಪದ**ವೆನ್ನುತ್ತಾರೆ. ಮೊದಲು ಸರಳ ಕ್ರಿಯಾಪದವನ್ನು ನೋಡೋಣ.

ಸರಳ ಕ್ರಿಯಾಪದವು ಒಂದೇ ಧಾತುವನ್ನು ಒಳಗೊಂಡಿರುತ್ತದೆ. ಇದು ಪೂರ್ಣ ಕ್ರಿಯೆಯಾಗಿರಬಹುದು. ಅಂದರೆ ವಾಕ್ಯಾರ್ಥವನ್ನು ಪೂರ್ಣಗೊಳಿಸುವಂಥದಾಗಿರುತ್ತದೆ. ಅಥವಾ ಅಪೂರ್ಣ ಕ್ರಿಯಾಪದವಾಗಿರಬಹುದು. ಅಂದರೆ ಇವು ವಾಕ್ಯಾರ್ಥವನ್ನು ಪೂರ್ಣಗೊಳಿಸುವುದಿಲ್ಲ. ಒಂದು ವಾಕ್ಯದಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಅಪೂರ್ಣ ಕ್ರಿಯಾಪದಗಳಿರಬಹುದು. ಆದರೆ ಸಾಮಾನ್ಯವಾಗಿ ಒಂದು ಪೂರ್ಣ ಕ್ರಿಯಾಪದವಿರುತ್ತದೆ.

ಧಾತುವೂ ಕೂಡ **ಸಹಜ** ಹಾಗೂ **ಸಾಧಿತ** ಎಂದು ಎರಡು ಪ್ರಕಾರಗಳಲ್ಲಿದೆ. ನಡೆ, ನೋಡು, ತಿನ್ನು ಮೊದಲಾದವುಗಳು ಸಹಜವಾದವುಗಳು. ಸಾಧಿತ ಧಾತುಗಳು ಸಾಮಾನ್ಯವಾಗಿ ಇಸು ಪ್ರತ್ಯಯವನ್ನು ಹೊಂದಿರುತ್ತವೆ. ಇಸು ಪ್ರತ್ಯಯವು ಕೆಳಗಿನ ರೀತಿಗಳಲ್ಲಿ ಕಂಡುಬರುತ್ತದೆ.

(1) ಹೊಂದು ಅಥವಾ ಅದನ್ನು ಮಾಡು ಎಂಬ ಅರ್ಥದಲ್ಲಿ ಮತ್ತು ಅನುಕರಣ ಶಬ್ದಗಳ ಮುಂದೆ — ಉದಾಹರಣೆಗೆ ಅಬ್ಬರಿಸಿ, ಸಿಂಗರಿಸು, ಕಳವಳಿಸು, ಧಗಧಗಿಸು, ವಟವಟಿಸು.
(2) ಸಂಸ್ಕೃತದ ಕೆಲವು ಧಾತುಗಳನ್ನು ಕನ್ನಡೀಕರಣಗೊಳಿಸಲು ಮತ್ತು ಕೆಲವು ನಾಮಗಳನ್ನು ಧಾತುವನ್ನಾಗಿಸಲು :— ಉದಾಹರಣೆಗೆ ರಚಿಸು, ರಕ್ಷಿಸು, ಭಕ್ಷಿಸು, ತ್ಯಜಿಸು, ರೂಪಿಸು, ಆಕೃತಿಸು, ಸಂದೇಹಿಸು, ಆಕ್ಷೇಪಿಸು.
(3) ಪ್ರೇರಣಾರ್ಥಕ ಧಾತುಗಳನ್ನು ರೂಪಿಸಲು ಅಂದರೆ ಇನ್ನೊಬ್ಬರಿಂದ ಕ್ರಿಯೆಯನ್ನು ಮಾಡಿಸು ಎಂಬರ್ಥವನ್ನು ಕೊಡುವಾಗ :— ಉದಾಹರಣೆಗೆ ನಡೆಸು, ಮಲಗಿಸು, ತಿನ್ನಿಸು, ಉಣ್ಣಿಸು (ಉಣಿಸು) ಕಲಿಸು, ಪ್ರೇರಣಾರ್ಥಕದಲ್ಲಿ ಕೆಲವೆಡೆಗಳಲ್ಲಿ ಹು ಪ್ರತ್ಯಯವೂ ಕಂಡುಬರುತ್ತದೆ. ತಿಳುಹು, ಇಳುಹು, ಕೆಡಹು (ವು).

ಸಾಧಿತ ಧಾತುಗಳು ನಾಮ ಮತ್ತು ಸಹಜ ಧಾತುಗಳ ಸಮಸ್ತ ಪದವಿರಬಹುದು. ಉದಾಹರಣೆಗೆ ಸಿಟ್ಟು ಆಗು = ಸಿಟ್ಟಾಗು, ನಾಶವಾಗು, ಮದುವೆಯಾಗು, ಬೆರಗಾಗು ಇತ್ಯಾದಿ.

### 3.6.1 ಪೂರ್ಣ ಕ್ರಿಯಾಪದ

ಗೋವಿಂದನು ಮನೆಗೆ ಬಂದು ಆಟಕ್ಕೆ ಹೋಗುತ್ತಾನೆ. ಈ ವಾಕ್ಯದಲ್ಲಿ ಹೋಗುತ್ತಾನೆ ಎಂಬುದು ಪೂರ್ಣ ಕ್ರಿಯಾಪದ. ಏಕೆಂದರೆ ಅದು ಇಲ್ಲದೆ ವಾಕ್ಯದ ಅರ್ಥ ಪೂರ್ತಿಯಾಗುವುದಿಲ್ಲ. ಉಳಿದ ಪದಗಳಲ್ಲಿ ಒಂದೆರಡು ಇಲ್ಲದಿದ್ದರೂ ವಾಕ್ಯಾರ್ಥಕ್ಕೆ ಬಾಧೆ ಬರುವುದಿಲ್ಲ. ಗೋವಿಂದನು ಮನೆಗೆ ಆಟಕ್ಕೆ ಹೋಗುತ್ತಾನೆ, ಗೋವಿಂದನು ಆಟಕ್ಕೆ ಹೋಗುತ್ತಾನೆ. ಇವೆಲ್ಲ ಪೂರ್ಣ ಅರ್ಥ ಕೊಡುತ್ತವೆ. ಕೆಲವೊಮ್ಮೆ ಕರ್ತೃವನ್ನು ಕೂಡ ಗುಪ್ತವಾಗಿ ಇಟ್ಟರೂ ನಡೆಯುತ್ತದೆ. ಉದಾಹರಣೆಗೆ 'ಮನೆಗೆ ಬಂದು ಆಟಕ್ಕೆ ಹೋಗುತ್ತಾನೆ' ಎಂದಾಗ ಕೂಡ ಒಂದು ಅರ್ಥ ಬೋಧೆಯಾಗುತ್ತದೆ. ಆದರೆ ಗೋವಿಂದನು ಮನೆಗೆ ಬಂದು 'ಆಟಕ್ಕೆ' ಎಂದಷ್ಟೇ ಅಂದಾಗ ಅರ್ಥ ಪೂರ್ತಿಯಾದಂತೆನಿಸುವುದಿಲ್ಲ. ಆದುದರಿಂದ ಅದು ವಾಕ್ಯವೆನಿಸಿಕೊಳ್ಳುವುದಿಲ್ಲ. ಆದುದರಿಂದಲೇ ಹೋಗುತ್ತಾನೆ ಎಂಬ ಪದ ಪೂರ್ಣ ಕ್ರಿಯಾಪದವೆನಿಸಿಕೊಳ್ಳುತ್ತದೆ.

ಪೂರ್ಣ ಕ್ರಿಯಾಪದವು ಪುರುಷ, ಲಿಂಗ ಮತ್ತು ವಚನಗಳಿಂದ ಕರ್ತೃವನ್ನು ಹೇಳುತ್ತಿರುತ್ತದೆ. ಅಂದರೆ 'ಹೋಗುತ್ತಾನೆ' ಎಂದಾಗ ಇದು ಮೂರನೆಯ ಪುರುಷದ, ಪುಲ್ಲಿಂಗದ, ಏಕವಚನದ ಕರ್ತೃವನ್ನು ಸೂಚಿಸುತ್ತದೆ. ಅದೇ 'ಹೋಗುತ್ತೇವೆ' ಎಂದಾಗ ಮೊದಲನೇ ಪುರುಷದ ಬಹುವಚನದ ಕರ್ತೃವು ಬೋಧೆಯಾಗುತ್ತದೆ. ಹೀಗೆ ಕನ್ನಡದಲ್ಲಿ ಒಂಬತ್ತು ತರಹದ ಕರ್ತೃವಿನ ನಿರ್ದೇಶವಿದೆ. ಅವು ಯಾವುವೆಂದರೆ:

| | ಏಕವಚನ | ಬಹುವಚನ |
|---|---|---|
| ಪ್ರಥಮ ಪುರುಷ | ನಾನು | ನಾವು |
| ದ್ವಿತೀಯ ಪುರುಷ | ನೀನು | ನೀವು (ತಾವು) |
| ತೃತೀಯ ಪುರುಷ ಪುಲ್ಲಿಂಗ | ಅವನು (ಇವನು) | ಪು.ಸ್ತ್ರೀ ಅವರು (ಇವರು) |
| ತೃತೀಯ ಪುರುಷ ಸ್ತ್ರೀಲಿಂಗ | ಅವಳು (ಇವಳು | |
| ತೃತೀಯ ಪುರುಷ ನಪುಂಸಕ ಲಿಂಗ | ಅದು (ಇದು) | ನಪುಂ. ಅವು (ಇವು) |

ಮೇಲಿನ ಪಟ್ಟಿಯಿಂದ ಪ್ರಥಮ, ದ್ವಿತೀಯ ಹಾಗೂ ತೃತೀಯ ಎಂದು ಮೂರು ಪುರುಷಗಳೂ, ಏಕವಚನದ ಬಹುವಚನ ಎಂಬ ಎರಡು ಸಂಖ್ಯೆಯನ್ನು ಆಧರಿಸಿದ ವಚನಗಳೂ, ಪುರುಷರ ಗಂಡು, ಹೆಣ್ಣು ಹಾಗೂ ಇತರ ಎಂಬ ಸಂಕೇತದಿಂದ ಗುರುತಿಸಲ್ಪಡುವ ಮೂರು ಪ್ರಕಾರದ ಲಿಂಗಗಳೂ ಕನ್ನಡದಲ್ಲಿವೆ ಎಂದು ಸ್ಪಷ್ಟವಾಗುತ್ತದೆ. ಕರ್ತೃವಿನ ಪುರುಷ, ಲಿಂಗ, ವಚನಗಳಿಗೆ ಅನುಗುಣವಾಗಿ ಕ್ರಿಯಾಪದವು ಬರುತ್ತದೆ.

## 3.6.2 ಕಾಲಗಳು

ಕನ್ನಡದಲ್ಲಿ ಮೂರು ಕಾಲಗಳು ಇವೆ. ವರ್ತಮಾನ ಕಾಲವು ಕ್ರಿಯೆಯು ತಾತ್ಕಾಲದಲ್ಲಿ ನಡೆಯುತ್ತಿರುವುದನ್ನು ಹೇಳುತ್ತದೆ. ಭೂತಕಾಲವು ನಡೆದು ಹೋದ ಕ್ರಿಯೆಯನ್ನು ಹೇಳುತ್ತದೆ, ಹಾಗೂ ಭವಿಷ್ಯತ್ಕಾಲವು ಮುಂದೆ ನಡೆಯುವ ಕ್ರಿಯೆಯನ್ನು ಸೂಚಿಸುತ್ತದೆ. ಹೇಗೆಂದರೆ:

ಸೀತೆಯು ಪಾಠವನ್ನು ಓದುತ್ತಾಳೆ. (ವರ್ತಮಾನಕಾಲ)
ನಿನ್ನೆ ಆಳು ಒಂದು ಗಂಟೆ ಕೆಲಸ ಮಾಡಿದನು. (ಭೂತಕಾಲ)
ನಾಳೆ ಮಳೆ ಬರುವುದು. (ಭವಿಷ್ಯತ್ಕಾಲ)

ಮೇಲಿನ ವಾಕ್ಯಗಳಲ್ಲಿ, ಕಾಲವನ್ನು ಸೂಚಿಸಲು ವಿಶಿಷ್ಟವಾದ ಪ್ರತ್ಯಯ ಧಾತುವಿನ ಮೇಲೆ ಬಂದಿದೆ ಎಂಬುದನ್ನು ಲಕ್ಷಿಸಬೇಕು. ವರ್ತಮಾನ ಕಾಲದಲ್ಲಿ 'ಉತ್ತ' ವೂ, ಭೂತಕಾಲದಲ್ಲಿ 'ದ್' ಅಥವಾ 'ಇದ್' ಹಾಗೂ ಭವಿಷ್ಯತ್ಕಾಲದಲ್ಲಿ 'ಉವ್' ಪ್ರತ್ಯಯವೂ ಸೇರಿವೆ. ಕಾಲ ಸೂಚಕಗಳ ಬೇರೆ ಬೇರೆ ಧಾತುಗಳ ಮೇಲೆ ಹೇಗೆ ಬರುತ್ತವೆ ಎಂಬುದನ್ನು ಕೆಳಗೆ ವಿವರಿಸಿದೆ . ಮೇಲೆ ಹೇಳಿದ ಮೂರು ಕಾಲಗಳಲ್ಲದೆ ನಿಷೇಧ ಮತ್ತು ಸಂಭಾವ್ಯ ಕಾಲಗಳೂ ಇವೆ. ಹೇಗೆಂದರೆ:

ನಾನು ಮನೆಗೆ ಹೋಗೆನು. (ನಿಷೇಧ)
ಗೋಪಾಲ ಶಾಲೆಗೆ ಹೋದಾನು. (ಸಂಭಾವ್ಯ)

ಈ ಐದೂ ಕಾಲಗಳಲ್ಲಿ ಹೇಗೆ ಕ್ರಿಯಾರೂಪವಿರುತ್ತದೆ:

(1) **ವರ್ತಮಾನಕಾಲ**

| | |
|---|---|
| ನಾನು ಓದುತ್ತೇನೆ | ನಾವು ಓದುತ್ತೇವೆ |
| ನೀನು ಓದುತ್ತೀ | ನೀವು ಓದುತ್ತೀರಿ |
| ಅವನು ಓದುತ್ತಾನೆ | ಅವರು ಓದುತ್ತಾರೆ |
| ಅದು ಓದುತ್ತದೆ | ಅವು ಓದುತ್ತವೆ |

(2) **ಭೂತಕಾಲ**

| | |
|---|---|
| ನಾನು ನಡೆದೆ | ನಾವು ನಡೆದೆವು |
| ನೀನು ನಡೆದಿ | ನೀವು ನಡೆದಿರಿ |
| ಅವನು ನಡೆದನು | ಅವರು ನಡೆದರು |
| ಅವಳು ನಡೆದಳು | |
| ಅದು ನಡೆಯಿತು | ಅವು ನಡೆದವು |

(3) ಭವಿಷ್ಯತ್ಕಾಲ

| | |
|---|---|
| ನಾನು ಕೊಡುವೆನು | ನಾವು ಕೊಡುವೆವು |
| ನೀನು ಕೊಡುವಿ | ನೀವು ಕೊಡುವಿರಿ |
| ಅವನು ಕೊಡುವನು | ಅವರು ಕೊಡುವರು |
| ಅವಳು ಕೊಡುವಳು | |
| ಅದು ಕೊಡುವುದು | ಅವು ಕೊಡುವವು |

(4) **ನಿಷೇಧ**

| | |
|---|---|
| ನಾನು ಹಿಡಿಯೆನು | ನಾವು ಹಿಡಿಯೆವು |
| ನೀನು ಹಿಡಿಯೆ | ನೀವು ಹಿಡಿಯಿರಿ |
| ಅವನು ಹಿಡಿಯನು | ಅವರು ಹಿಡಿಯರು |
| ಅವಳು ಹಿಡಿಯಳು | |
| ಅದು ಹಿಡಿಯದು | ಅವು ಹಿಡಿಯವು |

(5) ಸಂಭಾವ್ಯ

| | |
|---|---|
| ನಾನು ತಡೆದೇನು | ನಾವು ತಡೆದೇವು |
| ನೀನು ತಡೆದೀಯ | ನೀವು ತಡೆದೀರಿ |
| ಅವನು ತಡೆದಾನು | ಅವರು ತಡೆದಾರು |
| ಅವಳು ತಡೆದಾಳು | |
| ಅದು ತಡೆದೀತು | ಅವು ತಡೆದಾವು |

ಅಭ್ಯಾಸದಿಂದ ಇವು ಇನ್ನೂ ಧೃಡಪಡಬಲ್ಲವು.

## ಅಭ್ಯಾಸ - 3

(1) ಕೆಳಗಿನ ಕ್ರಿಯಾಪದಗಳಲ್ಲಿ ಯಾವುವು ಸಹಜ ಮತ್ತು ಯಾವುವು ಸಾಧಿತ ಎಂದು ವಿಂಗಡಿಸಿರಿ.

| | | | | | |
|---|---|---|---|---|---|
| ರಕ್ಷಿಸಲು | ( ) | ನಡೆಯದೆ | ( ) | ಅನುವಾದವಾಯಿತು | ( ) |
| ಪರಿಚಯಿಸಿ | ( ) | ನಮಿಸಲು | ( ) | ಮರೆಯದೇ | ( ) |
| ಮಾಡಿದರೆ | ( ) | ನುಡಿಸಿದರೆ | ( ) | ಮೆರೆದನು | ( ) |
| ಗುರುತಿಸನು | ( ) | ನಡೆಯಲಿಕ್ಕೆ | ( ) | ಆಲಿಸಿದನು | ( ) |

(2) ಕೆಳಗಿನ ಕ್ರಿಯಾಪದಗಳಕಾಲಗಳನ್ನು ಗುರುತಿಸಿರಿ.ವರ್ತಮಾನಕಾಲ, ಭೂತಕಾಲ,ಭವಿಷ್ಯತ್ಕಾಲ,ನಿಷೇಧ ಹಾಗೂ ಸಂಭಾವ್ಯಕಾಲಗಳನ್ನು ಆಯಾ ಅಕ್ಷರಗಳನ್ನು ಸೂಚಿಸಿ ಗುರುತಿಸಿರಿ.

| | | | | | |
|---|---|---|---|---|---|
| ಬಂದೀತು | ( ) | ನಡೆಯನು | ( ) | ತಡೆಯುವುದು | ( ) |
| ಓದುತ್ತಾನೆ | ( ) | ತಿಂದೆವು | ( ) | ಬೇಡಿದನು | ( ) |
| ಮರೆತಳು | ( ) | ನೋಡಿದೆನು | ( ) | ಕ್ಷಮಿಸುವನು | ( ) |
| ಅನುಕರಿಸಿದರು | ( ) | ಇದ್ದವು | ( ) | ಹೇಳುತ್ತೀರಿ | ( ) |

(3) ಕರ್ತೃವಿಗೆ ಸರಿ ಹೊಂದುವಂತೆ ಕೆಳಗಿನವುಗಳಲ್ಲಿ ಕ್ರಿಯಾಪದವನ್ನು ಸರಿಪಡಿಸಿ.

| | | | |
|---|---|---|---|
| ನಾನು ನಾಳೆ ಬಂದಾನು. | ( ), | ರಾಮ ಹೊಲಕ್ಕೆ ಹೋಗರು. | ( ), |
| ಸೀತೆ ಕಾಡಿನಲ್ಲಿದ್ದರು. | ( ), | ಒಂಟೆ ಬೆನ್ನು ಬಾಗಿಸಿದ್ದನು. | ( ) |
| ನೀವು ಯಾವ ಊರಿಂದ ಬಂದೆ. | ( ), | | ( ) |
| ಅವು ನಡೆದುದೆ ದಾರಿ ಆದವು. | ( ), | ಕಾಲಿಗೆ ಮುಳ್ಳು ಚುಚ್ಚಿದೆವು. | ( ) |
| ರಾಮಾ! ಯಾವಾಗ ಬಂದನು. | ( ), | | |

(4) ಕೆಳಗಿನ ಕ್ರಿಯಾಪದಗಳನ್ನು ಸೂಚಿಸಿದಂತೆ ಬದಲಾಯಿಸಿರಿ.

ವಸಂತ ಹಣ್ಣು ತಿನ್ನುತ್ತಾನೆ. .................... (ಭೂತಕಾಲ)
ದಾನಿ ದಾನ ಕೊಡುವವನು.............................................. (ಸಂಭಾವ್ಯ)
ಬೆಳಗ್ಗೆ 5 ಗಂಟೆಗೆ ಏಳುತ್ತೇನೆ. .............................................. (ನಿಷೇಧ)
ಮಳೆ ಬರುತ್ತಿದೆ. .............................................................. (ಭವಿಷ್ಯತ್ಕಾಲ)
ದಿನಾಲು ಒಂದೇ ವೇಳೆಗೆ ಊಟ ಮಾಡುತ್ತಾನೆ. ........................ (ಭೂತಕಾಲ)
ನಿನ್ನ ಕೆಲಸ ಮಾಡಿಸು. ................................................... (ಸಂಭಾವ್ಯ)
ಕೊಟ್ಟ ಕೆಲಸ ಮಾಡೀಯೆ. ............................................... (ನಿಷೇಧ)
ಬೆಳದಿಂಗಳು ಬರುವುದು. ................................................... (ವರ್ತಮಾನಕಾಲ)

## 3.7 ವಿಧಿಗಳು

ಹಿಂದೆ ಕಾಲಗಳ ಬಗ್ಗೆ ನೋಡಿದಾಗ ಅಲ್ಲಿ ಮುಖ್ಯವಾಗಿ ಕ್ರಿಯೆ ನಡೆಯುವ ವೇಳೆ ಸೂಚಿತವಾಗುತ್ತದೆ. ಅಲ್ಲದೆ ಅಲ್ಲಿ ಹೇಳಿದ ಐದೂ ಪ್ರಕಾರಗಳು ಒಂಬತ್ತು ವಿಧದಲ್ಲಿ ಕ್ರಿಯಾರೂಪ ಪಡೆಯುತ್ತವೆ. ಆದರೆ ವಿಧಿಗಳು ಹಾಗೆ ಒಂಬತ್ತು ಪ್ರಕಾರಗಳನ್ನು ಪಡೆಯುವುದಿಲ್ಲ. ವಿಧಿಗಳಲ್ಲಿ ಮೂರು ವಿಧ.

(1) ಇಚ್ಛಾರ್ಥ : ಇದು ಕೇವಲ ಪ್ರಥಮ ಪುರುಷರ ಸರ್ವನಾಮಗಳ ಜೊತೆಗೆ ಬರುತ್ತದೆ.
ಉದಾಹರಣೆಗೆ : ನಾನು ಹೋಗಲಾ.
ನಾವು ಹೋಗೋಣ.

(2) ಆಜ್ಞಾರ್ಥ : ಇದು ಕೇವಲ ದ್ವಿತೀಯ ಪುರುಷರ ಸರ್ವನಾಮಗಳ ಜೊತೆಗೆ ಬರುತ್ತದೆ.
ಉದಾಹರಣೆಗೆ : ನೀನು ಹೋಗು.
ನೀವು ಹೋಗಿರಿ.

(3) **ಅನುಜ್ಞಾರ್ಥ** : ಇದು ಕೇವಲ ತೃತೀಯ ಪುರುಷದ ಸರ್ವನಾಮ

ಉದಾಹರಣೆಗೆ : ಅವನು ಹೋಗಲಿ. ಅವರು

ಅವಳು ಹೋಗಲಿ.

## 3.8 ಅಪೂರ್ಣ ಕ್ರಿಯಾಪದ

ಅಪೂರ್ಣ ಕ್ರಿಯಾಪದವು ಪೂರ್ಣ ಕ್ರಿಯಾಪದವನ್ನು ಅಪೇಕ್ಷಿಸುತ್ತಿರುತ್ತದೆ. ಅಂದರೆ ಅವು ತಾವಾಗಿ ವಾಕ್ಯಾರ್ಥವನ್ನು ಪೂರ್ಣಗೊಳಿಸುವುದಿಲ್ಲ, ಎಂಬ ಮಾತನ್ನು ಹಿಂದೆ ನೋಡಿದ್ದೇವೆ. ಅಪೂರ್ಣ ಕ್ರಿಯಾಪದಗಳು ಐದು ವಿಧವಾಗಿವೆ.

(1) **ವರ್ತಮಾನ ಅಪೂರ್ಣ** : ಇದು ವರ್ತಮಾನ ಕಾಲ ಪ್ರತ್ಯಯದೊಡನೆ ರೂಪಗೊಳ್ಳುತ್ತದೆ. ಎರಡು ಕ್ರಿಯೆ ಏಕಕಾಲಕ್ಕೆ ನಡೆಯಉತ್ತವೆ ಎಂಬುದನ್ನು ಸೂಚಿಸುತ್ತದೆ.

ಉದಾಹರಣೆಗೆ : ಗಿರಿಜೆ ಓಡುತ್ತಾ ಬಂದಳು.

ಮೋಹನ ಹಾಡುತ್ತ ನೃತ್ಯ ಮಾಡಿದ.

ಇಲ್ಲಿ ಓಡುವ ಕ್ರಿಯೆ ಮತ್ತು ಬರುವ ಕ್ರಿಯೆ, ಹಾಗೂ ಹಾಡುವ ಕ್ರಿಯೆ ಮತ್ತು ನೃತ್ಯ ಮಾಡುವ ಕ್ರಿಯೆ ಏಕಕಾಲಕ್ಕೆ ನಡೆದಿವೆ.

(2) **ಭೂತ ಅಪೂರ್ಣ** : ಮೊದಲಿನ ಕ್ರಿಯೆ ನಡೆದು ಹೋಗಿದೆ ಎಂದು ಸೂಚಿಸುತ್ತದೆ.

ಬಸವ ಊಟ ಮಾಡಿ ನೀರು ಕುಡಿದ.
ರಾಜ ದಾನ ಕೊಟ್ಟು ಸಂತೋಷ ನೀಡಿದ.
ಸೂರ್ಯ ಉದಯಿಸಿ ಲೋಕ ಬೆಳಗಿತು.
ಮಳೆ ಬಂದು ಬೆಳೆ ನಗುತ್ತದೆ.

ಒಂದು ಮಾತನ್ನು ಗಮನಿಸಬೇಕು. ವರ್ತಮಾನ ಅಪೂರ್ಣ ಕ್ರಿಯಾಪದದಲ್ಲಿ ಎರಡೂ ಕ್ರಿಯೆಗಳನ್ನು ಮಾಡುವ ಕರ್ತೃ ಒಂದೇ ಇರುತ್ತದೆ. ಹೇಗೆಂದರೆ ಹಾಡುವವನೂ, ನೃತ್ಯಮಾಡುವವನೂ ಒಬ್ಬನೇ — ಅವನು ಮೋಹನ. ಆದರೆ ಭೂತ ಅಪೂರ್ಣ ಕ್ರಿಯಾಪದದಲ್ಲಿ ಎರಡೂ ಕ್ರಿಯೆಗಳಿಗೆ ಒಂದೇ ಕರ್ತೃ ಇರಬಹುದು, ಅಥವಾ ಭಿನ್ನ ಕರ್ತೃಗಳು ಇರಬಹುದು. ಹೇಗೆಂದರೆ ಊಟ ಮಾಡಿದವನೂ, ನೀರು ಕುಡಿದವನೂ ಒಬ್ಬನೇ ಬಸವ. ಆದರೆ, ಉದಯಿಸಿದವನು ಸೂರ್ಯ ಬೆಳಗಿದುದು ಲೋಕ. ಇಲ್ಲಿ ಎರಡೂ ಕ್ರಿಯೆಗಳಿಗೆ ಕರ್ತೃಗಳು ಬೇರೆ ಬೇರೆ ಆಗಿವೆ.

(3) **ನಿಷೇಧ ಅಪೂರ್ಣ** : ಮೊದಲಿನ ಕ್ರಿಯೆಯನ್ನು ಮಾಡದೆ ಎರಡನೆ ಕ್ರಿಯೆ ಮಾಡುವಾಗ ಈ ಪ್ರಯೋಗ ಬರುತ್ತದೆ. ಇದು ನಿಷೇಧ ಸೂಚಕ ಪ್ರತ್ಯಯ — 'ಅದೆ' ಯೊಡನೆ ಬರುತ್ತದೆ.

ಸ್ವತ: ಅಲ್ಲಿಗೆ ಹೋಗದೆ ಕೆಲಸವಾಗದು.
ನಿಂಗಪ್ಪ ಹೊಲಕ್ಕೆ ಹೋಗದೆ ಕೆಲಸವಾಗದು.
ನಿಂಗಪ್ಪ ಹೊಲಕ್ಕೆ ಹೋಗದೆ ಚಹದ ಅಂಗಡಿಗೆ ಹೋದ.
ಸಂಜೆಯೊಳಗೆ ಈ ಕೆಲಸ ಮಾಡದೆ ಇರಬೇಡಿ.
ತಾಯಿ ಹೇಳಿದುದನ್ನು ಕೇಳದೆ ಮಗಳು ಏನೋ ಮಾಡಿದಳು.

ನಿಷೇಧದ ಪ್ರಯೋಗ ಇನ್ನೂ ವೈವಿಧ್ಯ ಪೂರ್ಣವಾಗಿದೆ. ನಿರ್ಧಾರವನ್ನೂ, ಕಟ್ಟಾಜ್ಞೆಗಳನ್ನೂ ಸೂಚಿಸಲು ಈ ಪ್ರಯೋಗ ಸಫಲವಾಗಿದೆ. ಇಲ್ಲೂ ಕೂಡ ಎರಡೂ ಕ್ರಿಯೆಗಳ ಕರ್ತೃ ಒಂದೇ ಇರಬಹುದು ಅಥವಾ ಬೇರೆ ಬೇರೆ ಇರಬಹುದು.

(4) **ಕಾರ್ಯ ಕಾರಣಾರ್ಥ** : ಒಂದು ಕ್ರಿಯೆ ನಡೆಯುವುದು ಇನ್ನೊಂದನ್ನು ಅವಲಂಬಿಸಿಕೊಂಡಿದ್ದರೆ ಈ ಪ್ರಯೋಗ ಬರುತ್ತದೆ. ಹೇಗೆಂದರೆ,

ಮಳೆ ಬಂದರೆ ಬೆಳೆ ಬರುವುದು.
ಸೀತೆ ಹಾಡಿದರೆ ಜನ ನಗುತ್ತಾರೆ.
ನೀನು ಹೀಗೆ ಮಾಡಿದರೆ ಜನ ಏನಂದಾರು?
ರೈಲು ಬಂದರೆ ಬಸ್ಸು ಬರದು.

ಇಲ್ಲಿ ಮೊದಲಿನ ಕ್ರಿಯೆಯು ಕರ್ತೃವೂ ಎರಡನೆಯ ಕ್ರಿಯೆಯ ಕರ್ತೃವೂ ಭಿನ್ನಭಿನ್ನವಾಗಿರಲೇಬೇಕು. ಒಂದೇ ಕರ್ತೃವಿನೊಡನೆ ಕಾರ್ಯಾಕಾರಣಾರ್ಥ ಪ್ರಯೋಗಗಗಳು ಬರುವುದಿಲ್ಲ. ಅಲ್ಲದೆ ಮುಖ್ಯ ಕ್ರಿಯಾಪದ ವರ್ತಮಾನಕಾಲ, ಭವಿಷ್ಯತ್ಕಾಲ, ಸಂಭಾವ್ಯ ಅಥವಾ ನಿಷೇಧಗಳಲ್ಲಿ ಮಾತ್ರ ಇರುತ್ತದೆ. ಭೂತಕಾಲ ಸೂಚಿ ಪ್ರತ್ಯಯಗಳ ಮೇಲೆಯೇ — ಅರೆ ಎಂಬ ಕಾರ್ಯಕಾರಣಾರ್ಥ ಸೂಚಿ ಪ್ರತ್ಯಯ ಬರುತ್ತದೆ ಎಂಬುದನ್ನು ಗಮನಿಸಬೇಕು.

ಬಸ್ಸು ಬಂದರೆ ಬಂತು; ಬರದಿದ್ದರೆ ಇಲ್ಲ. ಇಂಥ ವಾಕ್ಯಗಳಲ್ಲೂ — ಅರೆ ಯುಕ್ತ ಪ್ರಯೋಗ ಕಂಡುಬರುತ್ತದೆ. ಆದರೆ ಅಲ್ಲಿ ಕಾರ್ಯಕಾರಣಾರ್ಥವಿಲ್ಲ ಎಂಬುದನ್ನೂ ಗಮನಿಸಬೇಕು.

(5) **ಭಾವಾರ್ಥಕ :** ಧಾತುಗಳಿಗೆ — ಅ,—ಅಲು, –ಅಲಿಕ್ಕೆ ಪ್ರತ್ಯಯಗಳು ಸೇರಿ ಭಾವಾರ್ಥಕ ಅಪೂರ್ಣ ಕ್ರಿಯಾಪದಗಳಾಗುತ್ತವೆ.

ಈ ಕೆಲಸ ಬೇಗ ಮಾಡಬೇಕು.
ಶಿಕ್ಷಕರು ಹುಡುಗನಿಗೆ ಮನೆಗೆ ಹೋಗಲು ಹೇಳಿದರು.
ತರಕಾರಿ ತರಲಿಕ್ಕೆ ಇಲ್ಲಿಗೆ ಬಂದಿರಾ?

ಇವುಗಳಲ್ಲಿ – ಅ ಪ್ರತ್ಯಯ ಸಹಿತವಾದವುಗಳು ಕೇವಲ ಸಂಯುಕ್ತ ಕ್ರಿಯಾಪದ ಮಾಡಲು ಉಪಯೋಗವಾಗುತ್ತವೆ. ಹೋಗಲು, ತರಲಿಕ್ಕೆ ಮೊದಲಾದ ಪ್ರಯೋಗಗಳು ಭಾವವನ್ನು ಸೂಚಿಸುತ್ತವೆ.

## ಅಭ್ಯಾಸ - 4

(1) ಕೆಳಗಿನ ಅಪೂರ್ಣ ಕ್ರಿಯೆಯ ಮುಂದೆ ಯಾವ ಪೂರ್ಣ ಕ್ರಿಯಾಪದ ಬರಬಲ್ಲದು ಎಂಬುದನ್ನು ಸೂಚಿಸಿರಿ.

ಅಂಗಡಿ ಬಾಗಿಲು ಮುಚ್ಚಿದರೆ ........................., ಕಣ್ಣು ತೆಗೆದರೆ ....................
ಅಲ್ಲಿಗೆ ಹೋಗದೆ ........................., ನೀರು ಬರದೆ ...........
ಕವಿ, ಬರೆಯುತ್ತ ......., ಗಿಳಿ ಹಾಡುತ್ತ ...........
ಪೇಟೆಗೆ ಬಂದು ........, ಮುಖ ನೋಡಿ ........
ಎಲ್ಲ ಮರೆಯಲು ......, ಭಾವನಿಗೆ ಬರಲಿಕ್ಕೆ ....

(2) ಕೆಳಗಿನ ವಾಕ್ಯಗಳಲ್ಲಿ ಬಿಟ್ಟ ಸ್ಥಳದಲ್ಲಿ ಕರ್ತೃ ಪದ ತುಂಬಿರಿ.

................ ...............ಕುಣಿಯುತ್ತಾ ಓಡುತ್ತಾನೆ.
..............................ಎದ್ದರೆ ................ಚಹ ಕೊಡುತ್ತಾಳೆ.
..............................ಒಮ್ಮೆ ಹೇಳಿದರೆ ....... ಅರ್ಥ ಮಾಡಿಕೊಳ್ಳುತ್ತಾನೆ.
..............................ಹೇಳದೆ ............ಮುಂದೆ ಸಾಗುವುದಿಲ್ಲ.

---

## 3.9 ಸಂಯುಕ್ತ ಕ್ರಿಯಾಪದ

---

ಸಂಯುಕ್ತ ಕ್ರಿಯಾಪದ ಒಂದಕ್ಕಿಂತ ಹೆಚ್ಚು, ಅಂದರೆ ಸಾಮಾನ್ಯವಾಗಿ ಎರಡು ಧಾತುಗಳನ್ನು ಒಳಗೊಂಡಿರುತ್ತದೆ. ಅವುಗಳಲ್ಲಿ ಮೊದಲಿನದು ಮುಖ್ಯ ಕ್ರಿಯೆಯಾಗಿರುತ್ತದೆ. ಅಂದರೆ ಅದರ ಅರ್ಥವು ಅಭಿವ್ಯಕ್ತವಾಗಿರುತ್ತದೆ. ಎರಡನೆಯದು ಸಹಾಯಕ ಕ್ರಿಯೆಯಾಗಿರುತ್ತದೆ. ಅದು ಮುಖ್ಯ ಕ್ರಿಯೆಯ, ಕಾಲದ ಮಾರ್ಪಾಡು ಮಾಡುತ್ತಿರುತ್ತದೆ. ಇಲ್ಲವೆ ಅದರ ಅರ್ಥವನ್ನು ಅವಧಾರಣೆ ಮಾಡುವಲ್ಲಿ ಸಹಾಯ ಮಾಡುತ್ತದೆ. ಅಥವಾ ಕ್ರಿಯೆಯ ವಿಧಾನವನ್ನು ಮಾರ್ಪಡಿಸುತ್ತದೆ. ಹೇಗೆಂಬುದನ್ನು ನೋಡೋಣ.

(1) ಸಹಾಯಕ ಕ್ರಿಯೆಗಾಗಿ ಇರು ಧಾತುವನ್ನು ಬಳಸಿದಾಗ ಕ್ರಿಯಾಪದದ ಕಾಲದಲ್ಲಿ ಮಾರ್ಪಾಡು ಉಂಟಾಗುತ್ತದೆ.

ರಾಜೀವ್ ಗಾಂಧಿ ಅಮೇರಿಕೆಗೆ ಹೋಗಿದ್ದರು. (ಪೂರ್ಣ ಭೂತಕಾಲ)
ನಿನ್ನೆ ರಾತ್ರಿಯೆಲ್ಲ ಮಳೆ ಬರುತ್ತಿತ್ತು (ಸತತ ಭೂತಕಾಲ)
ವಿಮಾನ ಕೆಲವೇ ನಿಮಿಷಗಳಲ್ಲಿ ಹಾರಲಿದೆ. (ಆಸನ್ನ ಭವಿಷ್ಯತ್ಕಾಲ)

ಮೇಲಿನ ಉದಾಹರಣೆಗಳಲ್ಲಿ ಹೋಗಿ + ಇದ್ದರು, ಬರುತ್ತಾ + ಇತ್ತು ಹಾರಲು + ಇದೆ, ಎಂಬ ಸಂಯುಕ್ತ ಕ್ರಿಯಾಪದಗಳಿವೆ. ಇವುಗಳಲ್ಲಿ ಸಹಾಯಕ ಕ್ರಿಯೆ ಇರು ಇದೆ. ಆದುದರಿಂದ ಕಾಲದ ಸೂಚನೆಯಲ್ಲಿ ಮಾರ್ಪಾಡು ಬರುತ್ತದೆ ಎಂಬುದನ್ನು ನೋಡಬೇಕು. ಮುಖ್ಯ ಧಾತುವಿನ ಅಪೂರ್ಣ ರೂಪಗಳು ಇವೆಯೆಂಬುದನ್ನು ಲಕ್ಷಿಸಬಹುದು. ಹೋಗಿ, ಬರುತ್ತ, ಹಾರಲು ಹೇಗೆ ಒಂದೊಂದು ಅಪೂರ್ಣ ಕ್ರಿಯೆಯ ನಂತರ ಸಹಾಯಕ ಕ್ರಿಯೆ ಬಂದಾಗ ಒಂದೊಂದು ಅರ್ಥ ಬರುತ್ತದೆ ಎಂಬುದನ್ನೂ ಗಮನಿಸಬೇಕು. ಅಲ್ಲದೆ ಎಲ್ಲ ಅಪೂರ್ಣಕ್ರಿಯೆಗಳ ನಂತರ ಎಲ್ಲ ಸಹಾಯಕ ಕ್ರಿಯೆಗಳೂ ಬರುವುದಿಲ್ಲವೆಂಬುದನ್ನೂ ಗಮನಿಸಬೇಕು. ಈ ನಿರ್ಬಂಧದ ನಿಯಮಗಳು ಕಾಲಕಾಲಕ್ಕೆ ಗೊತ್ತಾಗುತ್ತದೆ.

(2) ಸಹಾಯಕ ಕ್ರಿಯೆಗಾಗಿ ಬಿಡು ಉಪಯೋಗಿಸಿದಾಗ, ಮೂಲಕ್ರಿಯೆಯ ನಿಶ್ಚಿತತೆ ಸೂಚಿತವಾಗುತ್ತದ.
ಇದು ಭೂತ ಅಪೂರ್ಣಕ್ರಿಯೆಯ ನಂತರ ಮಾತ್ರ ಬರುತ್ತದೆ.
ಉಮೆ ಎಲ್ಲ ಹೇಳಿಬಿಟ್ಟಳು
ಅವನು ಹೇಳದೆ ಹೋಗಿ ಬಿಡುತ್ತಾನೆ.
ಮನೆ ಪಾಠ ಓದದೆ ಮಲಗಿಬಿಟ್ಟೆಯ.

(3) ಸಹಾಯಕ ಕ್ರಿಯೆಗಾಗಿ **ಕೊಳ್ಳು** ಪ್ರಯೋಗವಾದಾಗ, ಕ್ರಿಯೆಯ ಫಲ ಕರ್ತೃವಿಗೇ ಸಲ್ಲುತ್ತದೆ ಎಂಬ ಸೂಚನೆ ಸಿಗುತ್ತದೆ. ಇದೂ ಕೂಡ ಭೂತ ಅಪೂರ್ಣ ಕ್ರಿಯೆಯ ಮೇಲೆ ಪ್ರಯೋಗವಾಗುತ್ತದೆ:

ಗೋಪಾಲನು ದಾಡಿ ಮಾಡಿಕೊಂಡನು.
ಮಕ್ಕಳೇ, ಪಾಠವನ್ನು ಓದಿಕೊಳ್ಳಿರಿ.
ಈ ವಿಷಯ ನಾವು ನೋಡಿಕೊಳ್ಳೋಣ.

(4) ಸಹಾಯಕ ಕ್ರಿಯೆಗಾಗಿ **ಆಗು** ಅಥವಾ **ಪಡು**ವನ್ನು ಉಪಯೋಗಿಸಿದಾಗ ಕರ್ಮಣಿ ಅರ್ಥ ಹೊರಡುತ್ತದೆ. ಇವು **ಆಲು** ಪ್ರತ್ಯಯ ಸಹಿತವಾದ ಭಾವಾರ್ಥಕ ಅಪೂರ್ಣ ಧಾತುಗಳ ಮುಂದೆ ಮಾತ್ರ ಬರುತ್ತದೆ ಆಲು ಮುಂದೆ ಪಡು ಬಂದಾಗಲೂ — ಅಲುವಿನ ಅಂತ್ಯ ಸ್ವರ ಲೋಪವಾಗುತ್ತದೆಂಬ ನಿಯಮ ಗಮನಿಸಬೇಕು.

ಈ ಕೆಲಸ ಬೇಗನೆ ಮಾಡಲಾಯಿತು.
ನಾಳೆ ಶಾಲೆಯನ್ನು ಸಂದರ್ಶಿಸಲಾಗುವುದು.
ಹಾಗೆ ಎಂದೂ ಹೇಳಲಾಗದು.
ಸೂಕ್ತ ಬಹುಮಾನ ಕೊಡಲ್ಪಡುತ್ತದೆ.
ರಾಮನಿಂದ ರಾವಣ ಕೊಲ್ಲಲ್ಪಟ್ಟನು

ಮೇಲೆ ಹೇಳಿದ ಸಹಾಯಕ ಕ್ರಿಯಾಪದಗಳು ಒಂಬತ್ತು ಸರ್ವನಾಮಗಳಿಗೆ ಪರವಾಗಿ ಪ್ರತ್ಯಯ ತೆಗೆದುಕೊಳ್ಳಬಲ್ಲವು. ಅಲ್ಲದೆ ಸುಮಾರು ಎಲ್ಲ ಕಾಲಗಳಲ್ಲೂ ರೂಪ ಪಡೆಯಬಲ್ಲವು. ಆದರೆ ಮುಂದೆ ವಿವರಿಸುವಂಥದು ಕೇವಲ ಭೂತಕಾಲದ ಪ್ರತ್ಯಯವನ್ನು ತೆಗೆದುಕೊಳ್ಳುತ್ತದೆ.

(5) ಸಹಾಯಕ ಕ್ರಿಯೆ **ಆರು** ಕೇವಲ ಭೂತಕಾಲದ ಮೇಲೆ ಬರುವ ಪ್ರತ್ಯಯಗಳನ್ನು ತೆಗೆದುಕೊಳ್ಳುತ್ತದೆ. ಈ ಸಂಯುಕ್ತ ಕ್ರಿಯಾಪದದ ಅರ್ಥ ಅಸಮರ್ಥತೆಯನ್ನು ಸೂಚಿಸುತ್ತದೆ.

ನಾನೀ ರೀತಿ ಕೇಳಲಾರೆ.
ಮಗು ಇನ್ನೂ ನಡೆಯಲಾರದು.
ಈಗ ಏನೂ ಹೇಳಲಾರೆವು.

ಮುಂದೆ ವಿವರಿಸುವ ಸಹಾಯಕ ಕ್ರಿಯೆಗಳು ಈ ರೀತಿ ಬೇರೆ ಬೇರೆ ಪುರುಷಗಳಿಗೆ ಪರವಾಗಿ ಬೇರೆ ಬೇರೆ ಪ್ರತ್ಯಯಗಳನ್ನು ಪಡೆಯುವುದಿಲ್ಲ. ಅಂದರೆ ಎಲ್ಲ ಪುರುಷಗಳಿಗೂ ಪರವಾಗಿ ಒಂದೇ ರೀತಿಯ ಕ್ರಿಯಾರೂಪವಿರುತ್ತದೆ.

(6) ಬಹುದು, ಬಾರದು, ಬೇಕು, ಬೇಡ, ಕೂಡದು ಸಹಾಯಕ ಕ್ರಿಯೆಗಳು ಮುಖ್ಯ ಧಾತುವಿನ – ಅ ಪ್ರತ್ಯಯಾಂತ ಭಾವಾರ್ಥಕ ಅಪೂರ್ಣಕ್ರಿಯೆಯೊಡನೆ ಬರುತ್ತವೆ. ಇವುಗಳಲ್ಲಿ ಬಹುದು ಕ್ರಿಯೆಯು ಸಾಧ್ಯತೆಯನ್ನು ಅಥವಾ ಕ್ರಿಯೆಯ ಒಪ್ಪಿಗೆಯನ್ನು ಸೂಚಿಸುತ್ತದೆ.

ನಮ್ಮಿಂದ ಈ ಕೆಲಸ ಆಗಬಹುದು.
ನೀವೀಗ ಹೊರಗೆ ಹೋಗಬಹುದು.

ಬಾರದು ಎಂಬುದು ಕ್ರಿಯೆಗೆ ಪ್ರತಿಬಂಧಕವನ್ನು ಸೂಚಿಸುತ್ತದೆ.

ಒಳಗೆ ಯಾರೂ ಬರಬಾರದು.
ಅವನು ಅಲ್ಲಿಗೆ ಹೋಗಬಾರದು.

ಬೇಕು ಎಂಬುದು ಮುಖ್ಯ ಕ್ರಿಯೆ ನಡೆಯುವುದು ಅಗತ್ಯವಿದೆ. ಮಾಡುವುದು ಅಪೇಕ್ಷಣೀಯವಾಗಿದೆ, ಆ ಕ್ರಿಯೆಗೆ ವಿನಂತಿ ಇದೆ, ರೂಢಿಯಿದೆ ಎಂದು ಸೂಚಿಸುತ್ತದೆ.

ಈಗ ದೊಡ್ಡ ಮಳೆ ಬರಬೇಕು.
ನಾನೀಗ ಬೆಂಗಳೂರಿಗೆ ಹೋಗಬೇಕು.
ಎಲ್ಲರೂ ಒಳಗೆ ಬರಬೇಕು.

ಬೇಡ ಸಹಾಯಕ ಕ್ರಿಯೆಯು ಕ್ರಿಯೆ ನಡೆಯಬಾದೆಂಬಂತೆ ಆಜ್ಞೆ ವಿಧಿಸುತ್ತದೆ.

ದಿನಾಲು ಸಿನಿಮ ನೋಡಬೇಡ.
ದುಷ್ಟರು ಹೇಳಿದಂತೆ ಕೇಳಬೇಡ.

ಕೂಡದು ಸಹಾಯಕ ಕ್ರಿಯೆಯು ಪ್ರತಿಬಂಧಕತೆಯನ್ನು ಸೂಚಿಸುತ್ತದೆ.

ಇಲ್ಲಿ ಯಾರೂ ಇರಕೂಡದು.
ಒಳಗೆ ಬರಕೂಡದು.

(7) ಇಲ್ಲಎಂಬ ಸಹಾಯಕ ಕ್ರಿಯೆ ಮುಖ್ಯ ಧಾತುವಿನ -ಅಲು ಪ್ರತ್ಯಯಾಂತ ಭಾವಾರ್ಥಕ ಕ್ರಿಯೆಯ ಮುಂದೆ ಬರುತ್ತದೆ. ಕ್ರಿಯೆ ನಡೆಯದೆ ಇದ್ದುದರ ವರದಿ ಒಪ್ಪಿಸುತ್ತದೆ.

ತರಗತಿಗೆ ವಿದ್ಯಾರ್ಥಿಗಳು ಬರಲಿಲ್ಲ.
ಆ ಹಸು ಹಿಂದೆ ಬಂದರೆ ಒದೆಯಲಿಲ್ಲ ಮುಂದೆ ಬಂದರೆ ಹಾಯಲಿಲ್ಲ.

(8) ಸಾಕು ಎಂಬ ಸಹಾಯಕ ಕ್ರಿಯೆಯು ಮುಖ್ಯ ಧಾತುವಿನ – ಅಲಿಕ್ಕೆ ಪ್ರತ್ಯಯಾಂತ ಭಾವಾರ್ಥಕ ಕ್ರಿಯೆಯ ಮುಂದೆ ಬರುತ್ತದೆ. ಕ್ರಿಯೆ ನಡೆಯುವ ಆಸೆಯನ್ನು ವ್ಯಕ್ತಪಡಿಸುತ್ತದೆ.

ಇಷ್ಟರಲ್ಲೇ ಬಸ್ಸು ಬರಲಿಕ್ಕೆ ಸಾಕು.
ಹೇಳಿದ ಕೆಲಸವನ್ನು ಮಾಡಲಿಕ್ಕೆ ಸಾಕು.

## ಅಭ್ಯಾಸ - 5

(1) ಕೆಳಗಿನ ವಾಕ್ಯಗಳಲ್ಲಿ ತೋರಿಸಿದಂತೆ ಕ್ರಿಯಾಪದವನ್ನು ಮಾರ್ಪಡಿಸಿರಿ.

| | |
|---|---|
| ನಿನ್ನೆ ಬೆಂಗಳೂರಿಗೆ ಹೋದೆ | (ಪೂರ್ಣ ಭೂತ) |
| ಪಾಠ ಬರೆಯು ತ್ತಾನೆ | (ಅಪೂರ್ಣ ವರ್ತಮಾನ) |
| ಅದು ಏನು ಓದಿದೆ. | (ಸತತ ಭೂತಕಾಲ) |
| ಮಳೆ ಬರುತ್ತದೆ | (ಆಸನ್ನ ಭವಿಷ್ಯತ್ಕಾಲ) |

(2) ಕೆಳಗಿನ ವಾಕ್ಯಗಳಲ್ಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಸಹಾಯಕ ಕ್ರಿಯೆಯಿಂದ ತುಂಬಿರಿ.
ಯಾರೂ ಬಂದು ಹೋಗ..................(ಒಪ್ಪಿಗೆ)
ಯಾರೋ ಹೇಳಿದಂತೆ ಮಾಡ...............(ನಿಷೇಧ ಆಜ್ಞೆ )
ಒಳಗೆ ಹೊಕ್ಕು ಹೊರಗೆ ಬರಲಿಕ್ಕೆ ..........(ಆಸೆ) ಮಂದರವನ್ನು ಹತ
..........(ಪ್ರತಿಬಂಧಕ)
ಇದಕ್ಕೆ ಎಷ್ಟು ಹಣ ಕೊಡ ............. (ವಿನಂತಿ) ಎಲ್ಲ ಕೀಳ .........ಪ್ರತಿಬಂಧಕ

## 3.10 ಅವ್ಯಯ

ಅವ್ಯಯವೆಂದರೆ ವ್ಯಯವಿಲ್ಲದುದು ಎಂದರ್ಥ. ಅಂದರೆ ಯಾವ ವಿಧದ ಪ್ರತ್ಯಯಗಳಿಂದಲೂ ರೂಪ ಭೇದ, ರೂಪ ವಿಸ್ತಾರವನ್ನು ಪಡೆಯದೆ ಇರುವ ಪದ ಅವ್ಯಯ. ಅವ್ಯಯಗಳಲ್ಲಿ ಮೂರು ಪ್ರಕಾರಗಳು. (1) ನಾಮ ವಿಶೇಷಣಾವ್ಯಯ (2) ಕ್ರಿಯಾ ವಿಶೇಷಣಾವ್ಯಯ (3) ಅನುಕರಣಾವ್ಯಯ. ಈ ಎರಡರಲ್ಲೂ ಸಹಜ, ಸಾಧಿತ ಎಂಬೆರಡೆರಡು ಪ್ರಕಾರಗಳಿವೆ. ಹೀಗೆ ಒಟ್ಟು ನಾಲ್ಕು ಪ್ರಕಾರಗಳ ಅವ್ಯಯಗಳು ಏರ್ಪಟ್ಟಂತಾಯಿತು. ಉದಾಹರಣೆಗೆ ನೋಡೋಣ :

(1) ನಾಮ ವಿಶೇಷಣಾವ್ಯಯ :
ಸಹಜ : ಒಳ್ಳೆಯ, ಕೆಟ್ಟ, ಬಿರುಸು, ಮೃದು, ನೀಳ, ಐದು, ಮೂರು,
ಸಾಧಿತ : ಹಾಡುವ (ಕೋಗಿಲೆ), ಬಂದ, (ಹುಡುಗ), ನೋಡದ (ಹೂ),
ಹಿಂದಿನ, ಮೇಲಿನ, ಮುಂದಣ, ಕಠಿಣವಾದ (ಕೆಲಸ)

(2) ಕ್ರಿಯಾ ವಿಶೇಷಣಾವ್ಯಯ :
ಸಹಜ: ಬೇಗನೆ, ಇವತ್ತು, ನಾಳೆ, ಹಿಂದೆ, ಹತ್ತಿರ, ಕೂಡಲೆ, ಥಟ್ಟನೆ, ವರೆಗೆ, ತನಕ, ಅಂತೆ, ಹಾಗೆ
ಸಾಧಿತ: ತಡವಾಗಿ, ಮೆಲ್ಲಗೆ, ದೊಪ್ಪನೆ, ಮಿಡಮಿಡಗೆ, ಇದಿರಿಗೆ, ಮೇಲಕ್ಕೆ ಮುಂದಕ್ಕೆ

ನಾವು ವಿಶೇಷಣಾವ್ಯಯ ತಮ್ಮ ಮುಂದೆ ಇರುವ ನಾಮಪದವನ್ನು ಗುಣದಿಂದಲೋ, ಸಂಖ್ಯೆಯಿಂದಲೋ ಪರಿಮಾಣದಿಂದಲೋ ವರ್ಣಿಸುತ್ತಿರುತ್ತವೆ. ಅಂದರೆ ನಾಮಗಳ ಬಗ್ಗೆ ವಿಶೇಷವನ್ನು ಹೇಳುತ್ತಿರುತ್ತವೆ. ಷಷ್ಠೀ ವಿಭಕ್ತಿಯುಕ್ತ ಪದಗಳೂ ಸಂಬಂಧ ಸೂಚಿಸುವ ನಾಮದ ಪುರ್ವದಲ್ಲಿಯೇ ಬರುತ್ತವೆ. ಆದುದರಿಂದ ಇವೂ ಕೂಡ ವಿಶೇಷಣಗಳಂತೆಯೇ ಕಾರ್ಯ ಮಾಡುತ್ತವೆ. ಒಂದು ವಾಕ್ಯದಲ್ಲಿ ಒಂದಕ್ಕಿಂತ ಹೆಚ್ಚು ನಾಮಗಳು ಇರುವುದರಿಂದ ನಾಮಗಳನ್ನು ವರ್ಣಿಸುವ ಅವ್ಯಯಗಳು ಆಯಾ ನಾಮಗಳ ಪೂರ್ವದಲ್ಲಿಯೇ ಬರಬೇಕಾಗುತ್ತದೆ. ಆದರೆ ಕ್ರಿಯಾ ವಿಶೇಷಣಾವ್ಯಯಕ್ಕೆ ಈ ನಿಯಮವಿಲ್ಲ. ಅವು ವಾಕ್ಯದಲ್ಲಿ ಎಲ್ಲಿ ಬಂದರೂ ಅವುಗಳ ಅರ್ಥ ಮಾತ್ರ ಕ್ರಿಯೆಯೊಡನೆಯೇ ಹೋಗುತ್ತದೆ. ಏಕೆಂದರೆ ಒಂದು ವಾಕ್ಯದಲ್ಲಿ ಒಂದೇ ಮುಖ್ಯ ಕ್ರಿಯಾಪದವಿರುತ್ತದೆ ಒಂದು ಅಥವಾ ಹೆಚ್ಚು ಅಪೂರ್ಣ ಕ್ರಿಯೆಗಳಿದ್ದಾಗ ಮಾತ್ರ ಆಯಾ ಪದದ ಮೊದಲು ಇವು ಬರಬೇಕಾಗುತ್ತದೆ.
ಕೆಳಗಿನ ವಾಕ್ಯಗಳನ್ನು ಗಮನಿಸಿರಿ.

**ಕೆಟ್ಟ** ಜನರ ಸಹವಾಸದಿಂದ ಒಳ್ಳೆಯ ಮಕ್ಕಳೂ ಕೆಡುತ್ತಾರೆ.
ಈಗ ಬಂದ ಹುಡುಗನಿಗೆ **ಬಹಳ** ಸಡಗರ ಆಯಿತು.
**ಬೇಗನೆ** ಅಣ್ಣ ಬಂದು ಹೋದ.
ಮಳೆ ಬಂದ **ಕೂಡಲೇ** ಹವೆ ತಂಪಾಯಿತು.
**ತಡವಾಗಿ** ಬಂದು **ಬೇಗನೆ** ಹೋಗುವುದು ಯೋಗ್ಯರ ಲಕ್ಷಣವಲ್ಲ.

ದಪ್ಪಕ್ಷರಗಳಲ್ಲಿ ಸೂಚಿಸಿದವುಗಳೆಲ್ಲ ಅವ್ಯಯಗಳು. ಅವುಗಳು ಬರುವ ಸ್ಥಾನವನ್ನೂ ಅವುಗಳು ಮಾಡುವ ಕಾರ್ಯವನ್ನೂ ಗಮನಿಸಿರಿ.

ಅನುಕರಣಾವ್ಯಯ ಅಂದರೆ ಕ್ರಿಯೆಯ ಪರಿಣಾಮವನ್ನು ಹೆಚ್ಚಿಸುವುದಕ್ಕಾಗಿ ಉಪಯೋಗಿಸಲಾಗುವ ಅನುಕರಣವಾಚಿ ಶಬ್ದಗಳು. ಉದಾಹರಣೆಗೆ ಮರ **ದೊಪ್ಪನೆ** ಬಿತ್ತು. ಆಳು **ಬುದಿಂಗನೆ** ಎದ್ದನು. ಎದೆ **ಝಲ್** ಎಂದಿತು. ಉಳಿದ ಪ್ರಕಾರಗಳು ಮುಂದೆ ಗೊತ್ತಾಗುತ್ತದೆ.

## ಅಭ್ಯಾಸ - 6

(1) ಕೆಳಗಿನ ಅವ್ಯಯಗಳನ್ನು ವರ್ಗೀಕರಿಸಿರಿ. ನಾಮವಿಶೇಷಣಗಳನ್ನು (ನಾ) ಎಂದೂ, ಕ್ರಿಯಾ ವಿಶೇಷಣಗಳನ್ನು (ಕ್ರಿ) ಎಂದೂ ಗುರುತಿಸಿರಿ.

| | | | | | |
|---|---|---|---|---|---|
| ಸುಂದರ | (  ) | ಬಿರುಸಾಗಿ | (  ) | ಮಧುರ | (  ) |
| ಸಾವಕಾಶವಾಗಿ | (  ) | ಗಿರನೆ | (  ) | ಕರಿಯ | (  ) |
| _ಕಂಗಾಲಾಗಿ | (  ) | ಮರಮರ | (  ) | ಕೆಳಗೆ | (  ) |
| ಕಠಿಣ | (  ) | ಹಾಡಿದ | (  ) | ನಿನ್ನೆ | (  ) |

(2) ಕೆಳಗಿನ ವಾಕ್ಯಗಳಲ್ಲಿ ಸೂಕ್ತ ಅವ್ಯಯ ತುಂಬಿರಿ.
ಇದು ..............................ಪುಸ್ತಕ?
.............ಹಾಲನ್ನು ನಾನು ಹೇಗೆ ಕುಡಿದೇನು?
ಪರೀಕ್ಷೆಯಲ್ಲಿ ಉತ್ತರಗಳನ್ನು ..................ಬರೆಯಬೇಕು.
..................ಗಾಳಿ ಬೇಸಗೆಯಲ್ಲಿ ..................ಇರುತ್ತದೆ.

(3) ಕೆಳಗಿನ ಅವ್ಯಯಗಳು ಸಹಜವೋ (ಸ), ಸಾಧಿತವೋ (ಸಾ) ಎಂದು ಗುರುತಿಸಿರಿ.

| | | | | | |
|---|---|---|---|---|---|
| ಬಾಡದ | (  ) | ಮುರಕ | (  ) | ಮೇಲೆ | (  ) |
| ಬೇಗ | (  ) | ಓಸುಗ | (  ) | ಕಠಿಣ | (  ) |
| ಮೃದುವಾದ | (  ) | ಮಿರಮಿರ | (  ) | ವರೆಗೆ | (  ) |

## 3.11 ಸಾರಾಂಶ

ಈ ಅಂಶದಲ್ಲಿ ಪದರಚನೆಯ ಬಗ್ಗೆ ತಿಳಿದುಕೊಂಡಿರಿ. ಒಂದು ವಾಕ್ಯದಲ್ಲಿ ನಾಮಪದ, ಕ್ರಿಯಾಪದ ಮತ್ತು ಅವ್ಯಯಪದಗಳೆಂಬ ಮೂರು ವಿವಿಧ ಪದಗಳಿರುವುದನ್ನು ಗಮನಿಸಿದಿರಿ.

ನಾಮಪದದಲ್ಲಿಯ ಮೂಲರೂಪಕ್ಕೆ ನಾಮವೆನ್ನುತ್ತಾರೆ. ನಾಮಕ್ಕೆ ವಿಭಕ್ತಿ ಪ್ರತ್ಯಯಗಳು ಸೇರಿ ನಾಮಪದವಾಗುತ್ತದೆ. ನಾಮಗಳನ್ನು ವಸ್ತುವಾಚಕನಾಮ, ಸರ್ವನಾಮ, ವಿಶೇಷಣ, ಭಾವನಾಮ ಎಂದು ನಾಲ್ಕು ಗುಂಪಾಗಿ ವಿಂಗಡಿಸುತ್ತಾರೆ. ವಸ್ತುವಾಚಕದಲ್ಲಿ ರೂಢ, ಅನ್ವರ್ಥಕ, ಅಂಕಿತ ಎಂಬ ಮೂರು ಉಪಭೇದಗಳಿವೆ. ಸರ್ವನಾಮಗಳು ಎಲ್ಲ ನಾಮಗಳ ಸ್ಥಳದಲ್ಲಿ ಪುರುಷ ಲಿಂಗ ವಚನಗಳಿಗೆ ಅನುಸಾರವಾಗಿ ಬರುವಂಥವು. ವಿಶೇಷಣಗಳು ವಸ್ತುವನ್ನು ಗುಣ ಸಂಖ್ಯೆ ಮತ್ತು ಪರಿಮಾಣಗಳಿಂದ ವರ್ಣಿಸುತ್ತವೆ. ಭಾವನಾಮಗಳು ಗುಣಧರ್ಮ ಅಥವಾ ಕ್ರಿಯೆಯನ್ನು ಸೂಚಿಸುತ್ತವೆ.

ವಿಭಕ್ತಿ ಪ್ರತ್ಯಯಗಳಲ್ಲಿ ಎಂಟು ಪ್ರಕಾರಗಳಿವೆ. ಅವು ಕ್ರಮವಾಗಿ ಉ, ಅನ್ನು, ಇಂದ, ಗೆ, ಇಗೆ ಅಥವಾ ಕ್ಕೆ ಇಂದ, ಅ, ಅಲ್ಲಿ ಅಥವಾ ಒಳಗೆ ಮತ್ತು ಏ.

ಕನ್ನಡದಲ್ಲಿ ವಚನಗಳು ಎರಡು. ಏಕವಚನ ಮತ್ತು ಬಹುವಚನ. 'ಒಂದಕ್ಕಿಂತ ಹೆಚ್ಚು' ಎಂದು ಸೂಚಿಸುವಾಗ ಬಹುವಚನ ಪ್ರತ್ಯಯ ಸೇರಿಸುತ್ತಾರೆ. ಯಾವ ಬಹುವಚನ ಪ್ರತ್ಯಯವೂ ಸೇರಿರದಿದ್ದರೆ, ಅದು ಏಕವಚನವೆಂದು ಗುರುತಿಸಲಾಗುತ್ತದೆ.

ಕನ್ನಡದಲ್ಲಿ ಮೂರು ಲಿಂಗಗಳಿವೆ. ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕಲಿಂಗ.
ಧಾತು-ಕ್ರಿಯಾಪದ
ಕ್ರಿಯಾಪದದ ಮೂಲರೂಪಕ್ಕೆ ಧಾತುವೆನ್ನುತ್ತಾರೆ.
ಕ್ರಿಯಾಪದದಲ್ಲಿ ಒಂದು ಧಾತುವಿರುತ್ತದೆ. ಅಂಥ ಕ್ರಿಯಾಪದಗಳಿಗೆ ಸರಳ ಕ್ರಿಯಾಪದವೆನ್ನುತ್ತಾರೆ. ಒಂದಕ್ಕಿಂತ ಹೆಚ್ಚು ಧಾತುಗಳು ಇರುವುದೂ ಉಂಟು. ಅಂಥ ಕ್ರಿಯಾಪದಗಳಿಗೆ ಸಂಯುಕ್ತ ಕ್ರಿಯಾಪದವೆನ್ನುತ್ತಾರೆ.

ಧಾತುವುನಲ್ಲಿ ಸಹಜ ಹಾಗೂ ಸಾಧಿತ ಎಂಬ ಎರಡು ಪ್ರಕಾರಗಳಿವೆ..
ಪೂರ್ಣ ಕ್ರಿಯಾಪದವು ವಾಕ್ಯವನ್ನು ಅರ್ಥಪೂರ್ಣಗೊಳಿಸುವುದು.
ಕನ್ನಡದಲ್ಲಿ ವರ್ತಮಾನಕಾಲ, ಭೂತಕಾಲ ಮತ್ತು ಭವಿಷ್ಯತ್ಕಾಲವೆಂಬ ಮೂರು ಕಾಲಗಳಿವೆ.

ವರ್ತಮಾನಕಾಲವು ಕ್ರಿಯೆಯು ತಾತ್ಕಾಲದಲ್ಲಿ ನಡೆಯುತ್ತಿರುವುದನ್ನು ಸೂಚಿಸುತ್ತದೆ. ಭೂತಕಾಲವು ನಡೆದು ಹೋದ ಕ್ರಿಯೆಯನ್ನು ಹೇಳುತ್ತದೆ. ಭವಿಷ್ಯತ್ಕಾಲವು ಮುಂದೆ ನಡೆಯುವ ಕ್ರಿಯೆಯನ್ನು ಸೂಚಿಸುತ್ತದೆ. ನಿಷೇದ ಮತ್ತು ಸಂಭಾವ್ಯ ಕಾಲವೆಂಬ ಇನ್ನೂ ಎರಡು ಕಾಲಗಳಿವೆ. ವಿಧಿಗಳಲ್ಲಿ ಮೂರು ವಿಧ. ಅವು ಇಚ್ಛಾರ್ಥ, ಆಜ್ಞಾರ್ಥ, ಮತ್ತು ಅನುಜ್ಞಾರ್ಥ. ಅಪೂರ್ಣ ಕ್ರಿಯಾಪದಗಳು ಐದು ವಿಧಗಳಾಗಿವೆ. ವರ್ತಮಾನ ಅಪೂರ್ಣ ಭೂತ ಅಪೂರ್ಣ, ನಿಷೇಧ ಅಪೂರ್ಣ, ಕಾರ್ಯಕಾರಣಾರ್ಥ ಮತ್ತು ಭಾವಾರ್ಥಕ. ಸಂಯುಕ್ತ ಕ್ರಿಯಾಪದ ಒಂದಕ್ಕಿಂತ ಹೆಚ್ಚು ಧಾತುಗಳನ್ನು ಒಳಗೊಂಡಿರುತ್ತದೆ. ಅವುಗಳಲ್ಲಿ ಮೊದಲನೆಯದು ಮುಖ್ಯ ಕ್ರಿಯೆಯಾಗಿರುತ್ತದೆ. ಎರಡನೆಯದು ಸಹಾಯಕ ಕ್ರಿಯೆಯಾಗಿರುತ್ತದೆ.

ಯಾವ ವಿಧದ ಪ್ರತ್ಯಯಗಳಿಂದಲೂ ರೂಪ ಭೇದ, ರೂಪ ವಿಸ್ತಾರವನ್ನು ಪಡೆಯದೇ ಇರುವ ಪದ ಅವ್ಯಯ. ಇದರಲ್ಲಿ ಮೂರು ವಿಧ. ನಾಮವಿಶೇಷಣಾವ್ಯ ಕ್ರಿಯಾ ವಿಶೇಷಣಾವ್ಯಯ ಮತ್ತು ಅನುಕರಣಾವ್ಯಯ.

## ಅಭ್ಯಾಸಗಳಿಗೆ ಉತ್ತರಗಳು

**ಅಭ್ಯಾಸ - 1**

(1)

| | | |
|---|---|---|
| 2 | 2 | 3 |
| 2 | 3 | 3 |
| 1 | 1 | 3 |
| 2 | 4 | 5 |
| 4 | 3 | 5 |

(2)

| 1 | 2 | 3 | 4 | 5 |
|---|---|---|---|---|
| ಗೋಪಾಲ | ಮರ | ನಾಯಿ | ಕರು | ನೀರು |
| ಗೋವಿಂದ | ಪುಸ್ತ | ನರಿ | ಮೆಣಸು | ಹೂವು |
| ಮಾಧವ | ನೊಣ | ಕಾಗೆ | ಮಗು | ಹಣ್ಣು |
| ಮಧುಸೂದನ | ಸುಣ್ಣ | ಕೊಡೆ | ಮಗಳು | ಕಾಳು |

(3)

| | | |
|---|---|---|
| ಸಪ್ತಮೀ ವಿಭಕ್ತಿ | ಪಂಚಮೀ ವಿಭಕ್ತಿ | ಚತುರ್ಥೀ ವಿಭಕ್ತಿ |
| ದ್ವಿತೀಯಾ ವಿಭಕ್ತಿ | ಸಪ್ತಮೀ ವಿಭಕ್ತಿ | ತೃತೀಯಾ ವಿಭಕ್ತಿ |
| ಪ್ರಥಮಾ ವಿಭಕ್ತಿ | ದ್ವಿತೀಯಾ ವಿಭಕ್ತಿ | ಚತುರ್ಥೀ ವಿಭಕ್ತಿ |
| ತೃತೀಯಾ ವಿಭಕ್ತಿ | ಸಂಬೋಧನಾ ವಿಭಕ್ತಿ | ಷಷ್ಠೀ ವಿಭಕ್ತಿ |
| ಷಷ್ಠೀ ವಿಭಕ್ತಿ | ಸಪ್ತಮೀ ವಿಭಕ್ತಿ | ಚತುರ್ಥೀ ವಿಭಕ್ತಿ |

(4)

| | | |
|---|---|---|
| ಗುರುವಿಗೆ | ಮರವನ್ನು | ಅಭಿಮಾನದೊಳಗೆ |
| ಆಳಿಗೆ | ವಸ್ತುವಿಗೆ | ದಿಕ್ಕಿಗೆ |
| ಕರಿಯನ್ನು | ಮಂದಿರದಲ್ಲಿ | ಹಂದರದಲ್ಲಿ |

(5)

| | | | |
|---|---|---|---|
| ಗೋಪಾಲನು | ಮರವು | ನಾಯಿಯು | ಕರುವು |
| ಗೋಪಾಲನನ್ನು | ಮರವನ್ನು | ನಾಯಿಯನ್ನು | ಕರುವನ್ನು |
| ಗೋಪಾಲನಿಂದ | ಮರದಿಂದ | ನಾಯಿಯಿಂದ | ಕರುವಿಂದ |
| ಗೋಪಾಲನಿಗೆ | ಮರಕ್ಕೆ | ನಾಯಿಗೆ | ಕರುವಿಗೆ |
| ಗೋಪಾಲನಿಂದ | ಮರದಿಂದ | ನಾಯಿಯಿಂದ | ಕರುವಿನಿಂದ |
| ಗೋಪಾಲನ | ಮರದ | ನಾಯಿಯ | ಕರುವಿನ |
| ಗೋಪಾಲನಲ್ಲಿ | ಮರದಲ್ಲಿ | ನಾಯಿಯಲ್ಲಿ | ಕರುವಿನಲ್ಲಿ |
| ಗೋಪಾಲನೇ | ಮರವೇ | ನಾಯಿಯೇ | ಕರುವೇ |

**ಅಭ್ಯಾಸ - 2**

(ಅ)

| ಹೊಲ | | ದನ | |
|---|---|---|---|
| ಏ.ವ | ಬ.ವ | ಏ.ವ | ಬ.ವ |
| ಹೊಲವು | ಹೊಲಗಳು | ದನವು | ದನಗಳು |
| ಹೊಲವನ್ನು | ಹೊಲಗಳನ್ನು | ದನವನ್ನು | ದನಗಳನ್ನು |
| ಹೊಲದಿಂದ | ಹೊಲಗಳಿಂದ | ದನದಿಂದ | ದನಗಳಿಂದ |

| | | | |
|---|---|---|---|
| ಹೊಲಕ್ಕೆ | ಹೊಲಗಳಿಗೆ | ದನಕ್ಕೆ | ದನಗಳಿಗೆ |
| ಹೊಲದಿಂದ | ಹೊಲಗಳಿಂದ | ದನದಿಂದ | ದನಗಳಿಂದ |
| ಹೊಲದ | ಹೊಲಗಳ | ದನದ | ದನಗಳ |
| ಹೊಲದಲ್ಲಿ | ಹೊಲಗಳಲ್ಲಿ | ದನದಲ್ಲಿ | ದನಗಳಲ್ಲಿ |
| ಹೊಲವೇ | ಹೊಲಗಳೇ | ದನವೇ | ದನಗಳೇ |

(ಆ)

| | | |
|---|---|---|
| (ಸ್ತ್ರೀ) | (ನ) | (ನ) |
| (ನ) | (ನ) | (ಪು) |
| (ಪು) | (ನ) | (ಸ್ತ್ರೀ) |
| (ನ) | (ನ) | (ನ) |

**ಅಭ್ಯಾಸ - 3**

(1)

| | | |
|---|---|---|
| ಸಾಧಿತ | ಸಹಜ | ಸಹಜ |
| ಸಾಧಿತ | ಸಾಧಿತ | ಸಹಜ |
| ಸಹಜ | ಸಾಧಿತ | ಸಹಜ |
| ಸಾಧಿತ | ಸಹಜ | ಸಾಧಿತ |

(2)

| | | |
|---|---|---|
| ಸಂ | ನಿ | ಭ |
| ವ | ಭೂ | ಭೂ |
| ಭೂ | ಭೂ | ಭ |
| ಭೂ | ಭೂ | ವ |

**ಅಭ್ಯಾಸ - 2**

(3)

| | |
|---|---|
| ಬಂದೇನು | ಹೋಗನು |
| ಕಾಡಿನಲ್ಲಿದ್ದಳು | ಬಾಗಿಸಿತು |
| ಬಂದಿರಿ | ಚುಚ್ಚಿತು |
| ಆಯಿತು | |
| ಬಂದೆ | |

(4) ತಿಂದನು
ಕೊಟ್ಟಾನು
ಏಳೆನು
ಬರುವುದು
ಮಾಡಿದೆ
ಮಾಡಿಯಾನು
ಮಾಡೆ
ಬರುತ್ತದೆ

**ಅಭ್ಯಾಸ - 4**

(1)

| | |
|---|---|
| ವ್ಯಾಪಾರ ಆಗದು. | ಕಾಣಿಸುವುದು. |
| ಕೆಲಸವಾಗದು | ಸ್ನಾನವಿಲ್ಲ. |
| ಸ್ಫೂರ್ತಿಗೊಂಡನು. | ಹಾರಿತು. |
| ತೆಗೆದುಕೊಂಡು ಹೋಗು. | ಮಣೆ ಹಾಕಿದರು |
| ಆಗುವುದಿಲ್ಲ. | ಆಗಲಿಲ್ಲ. |

(2)

| | |
|---|---|
| ಗೋಪಿ | |
| ತಾಯಿ | ಮಗಳು |
| ಗುರು | ಶಿಷ್ಯ |
| ಕಥೆ | ಊಟ |

**ಅಭ್ಯಾಸ - 5**

(1) ಹೋಗಿದ್ದೆ.
ಪಾಠ ಬರೆಯುತ್ತ
ಓದುತ್ತಿದ್ದೆ
ಬರಲಿದೆ

(2) ಬಹುದು
ಬೇಡ, ಕೂಡದು
ಸಾಕು, ಬಾರದು
ಬೇಕು, ಬಾರದು

**ಅಭ್ಯಾಸ - 6**

| | | | |
|---|---|---|---|
| (1) | (ನಾ) | (ಕ್ರಿ) | (ನಾ) |
| | (ಕ್ರಿ) | (ಕ್ರಿ) | (ನಾ) |
| | (ಕ್ರಿ) | (ಕ್ರಿ) | (ಕ್ರಿ) |
| | (ನಾ) | (ನಾ) | (ಕ್ರಿ) |
| (2) | ಎಂತಹ | ಯಾವ | |
| | ಇಂತಹ | ಈ | |
| | ಚೆನ್ನಾಗಿ | | |
| | ತಂಪು | ಹಿತವಾಗಿ | |
| (3) | ಸಾ | ಸಾ | ಸ |
| | ಸ | ಸ | ಸ |
| | ಸಾ | ಸ | ಸ |